ಮುಂಬಯಿ ಇಲಾಖೆಯೊಳಗಿನ ಕರ್ನಾಟಕ ಭಾಗ

ಅಥವಾ

# ದಕ್ಷಿಣ ಮಹಾರಾಷ್ಟ್ರ ಕಾನಡಾ ಸಹಿತ.

## ೧ನೇ ಭಾಗ.

### ವರ್ಣನೆಯು.

ಈ ಪ್ರಾಂತವು ಮುಂಬಯಿ ಇಲಾಖೆಯ ದಕ್ಷಿಣ ಭಾಗವಿರುತ್ತದೆ. ಇದು ಉತ್ತರ ಅಕ್ಷಾಂಶ ೧೩ ೫೫ ಮತ್ತು ೧೭ ೨೮ ಇವೆರಡುಗಳ ಮಧ್ಯದಲ್ಲಿಯೂ ಪೂರ್ವ ರೇಖಾಂಶ ೭೩ ೫೫ ಮತ್ತು ೭೬ ೩೧ ಇವೆರಡುಗಳ ಮಧ್ಯದಲ್ಲಿಯೂ ವಿಸ್ತರಿಸಿರುವದು. ಇದರ ಪರಮಾವಧಿ ಉದ್ದಳತಿ ಸುಮಾರು ೨೧೦ ಮೈಲು; ಪರಮಾವಧಿ ಅಗಲಳತಿ ಸುಮಾರು ೧೬೭ ಮೈಲು; ಕ್ಷೇತ್ರಫಲ ೨೫೨೮೯ ಚಚ್ಚೌಕು ಮೈಲು; ಜನಸಂಖ್ಯೆ ಸುಮಾರು ೪೦೩೩೬೦೦; ಚಚ್ಚೌಕು ಮೈಲಿಗೆ ಸರಾಸರೀ ಜನಸಂಖ್ಯೆ ೧೫೯.೪೯.

**ಮೇರೆಗಳು**

ಈ ಪ್ರಾಂತವು ಮುಂಬಯಿ ಇಲಾಖೆಯ ದಕ್ಷಿಣ ಭಾಗವಾಗಿರುತ್ತದೆ. ಉತ್ತರದಲ್ಲಿ ವಾರಣಾ, ಭೀಮಾ ನದಿಗಳೇ ಇದರ ಮೇರೆಯಾಗಿರುತ್ತವೆ. ಅವುಗಳಾಚೆಯಲ್ಲಿ ಸಾತಾರೀ ಜಿಲ್ಲೆ, ಸೊಲ್ಲಾಪುರ ಜಿಲ್ಲೆ, ಅಂಕಲಕೋಟೆಯ ಸಂಸ್ಥಾನ, ನಿಜಾಮನ ರಾಜ್ಯ, ಇವು ಈ ಕರ್ನಾಟಕ ಭಾಗಕ್ಕೆ ಹೊಂದಿರುತ್ತವೆ; ಪೂರ್ವ ಮೇರೆಗೂ ನಿಜಾಮನ ರಾಜ್ಯವು ಹೊಂದಿರುತ್ತದೆ; ಅದರ ದಕ್ಷಿಣದಲ್ಲಿ ಬಳ್ಳಾರೀ ಜಿಲ್ಲೆ, ಮೈಸೂರ ಸಂಸ್ಥಾನ, ಇವುಗಳಿಗೂ ಈ ಕರ್ನಾಟಕ ಭಾಗಕ್ಕೂ ನಡುವೆ ತುಂಗಭದ್ರೆಯು ಉತ್ತರವಾಹಿನಿಯಾಗಿ ಹರಿಯುತ್ತದೆ. ದಕ್ಷಿಣ ಮೇರೆಯಲ್ಲಿ ಮೈಸೂರ ಸಂಸ್ಥಾನವೂ ಮಂಗಳೂರ ಜಿಲ್ಲೆಯೂ ಇದಕ್ಕೆ ಹೊಂದಿರುತ್ತವೆ. ಪಶ್ಚಿಮದಲ್ಲಿ ಈ ಪ್ರಾಂತದ ದಕ್ಷಿಣ ತುದಿಯಿಂದ ಕಾರವಾಡದ ವರೆಗೆ ಅರಬೀ ಸಮುದ್ರವೇ ಇದರ ಮೇರೆಯು; ಅದರ ಉತ್ತರದಲ್ಲಿ ಸಮುದ್ರ ತೀರಕ್ಕೂ ಈ ಕರ್ನಾಟಕ ಭಾಗಕ್ಕೂ ನಡುವೆ ಸಹ್ಯಾದ್ರಿಯ ಪರ್ವತಾವಳಿಯುಂಟು.

**ವಿಭಾಗಗಳು**

ಮುಂಬಯಿ ಇಲಾಖೆಗೆ ಶೇರಿದ ಕರ್ನಾಟಕ ಭಾಗದಲ್ಲಿ ಅಲ್ಪ ಸ್ವಲ್ಪ ಪ್ರದೇಶವನ್ನು ಕೊಲ್ಲಾಪುರ* ಮುಂತಾದ ದೇಶೀ ಅರಸರ ಸಂಸ್ಥಾನಗಳು ಆಕ್ರಮಿಸಿರುತ್ತವೆ. ಅವುಗಳನ್ನು ಮುಂದೆ ೧೫ನೇ ಭಾಗದಲ್ಲಿ ವಿವರಿಸುವ. ಉಳಿವ ಯಾವತ್ತು ಪ್ರಾಂತವು ಇಂಗ್ಲಿಷ ಸರಕಾರದ ರಾಜ್ಯಕ್ಕೆ ಶೇರಿರುತ್ತವೆ. ಅದರಲ್ಲಿ

* ಕೊಲ್ಲಾಪುರದ ರಾಜ್ಯವು ಮಹಾರಾಷ್ಟ್ರದ ಭಾಗವಾದಾಗ್ಯೂ ಕಾರಭಾರದ ಸೌಲಭ್ಯಕ್ಕಾಗಿ ಅದನ್ನು ದಕ್ಷಿಣ ಮಹಾರಾಷ್ಟ್ರದ ಸಂಸ್ಥಾನಗಳಲ್ಲಿ ಎಣಿಸುತ್ತಾರೆ.

ಕಾರಭಾರದ ಸೌಲಭ್ಯಕ್ಕೋಸ್ಕರವಾಗಿ, ವಿಜಾಪುರ, ಬೆಳಗಾವಿ, ಧಾರವಾಡ, ಕಾನಡಾ, ಯೆಂಬ ನಾಲ್ಕು ಜಿಲ್ಲೆಗಳನ್ನು ಮಾಡಿ, ಪ್ರತಿ ಯೊಂದು ಜಿಲ್ಲೆಯಲ್ಲಿ ತಾಲೂಕುಗಳೆಂಬ ವಿಭಾಗಗಳನ್ನು ಮಾಡಿದ್ದಾರೆ. ಇವುಗಳ ಕ್ಷೇತ್ರ, ಜನಸಂಖ್ಯೆ, ಗ್ರಾಮಸಂಖ್ಯೆ, ಮುಂತಾದ ವಿವರಗಳು ಕೆಳಗಿನ ಕೋಷ್ಟಕದಲ್ಲಿ ತೋರಿಸಲ್ಪಟ್ಟಿವೆ.

## ಜಿಲ್ಲೆಗಳೂ ತಾಲೂಕುಗಳೂ.

### ೧. ವಿಜಾಪುರ ಜಿಲ್ಲೆ.

| ತಾಲೂಕುಗಳು. | ಗ್ರಾಮುಗಳು ಇನಾಮಿಾ ಬೇಚಿರಾಖ ಸಹಿತ. | ಕ್ಷೇತ್ರಫಲ ಚ. ಮೈ. | ಜನಸಂಖ್ಯೆ ೧೮೮೧. | ವಸೂಲು ೧೮೮೧. |
|---|---|---|---|---|
| ೧. ಇಂಡಿ | ೧೩೬ | ೮೭೧ | ೭೧೯೪೦ | ೧೭೪೩೧೦ |
| ೨. ಸಿಂದಗಿ | ೧೫೦ | ೮೧೨ | ೭೨೬೫೦ | ೧೮೮೨೩೦ |
| ೩. ವಿಜಾಪುರ | ೧೦೮ | ೮೬೯ | ೭೬೮೯೬ | ೧೨೫೮೭೦ |
| ೪. ಬಾಗೇವಾಡಿ | ೧೨೮ | ೭೬೪ | ೮೬೭೪೩ | ೨೦೦೩೩೦ |
| ೫. ಮುದ್ದೇಬಿಹಾಳ | ೧೬೧ | ೫೬೪ | ೬೫೦೨೪ | ೧೪೦೪೮೦ |
| ೬. ಬಾಗಲಕೋಟೆ | ೨೦೦ | ೬೮೩ | ೯೬೧೫೬ | ೧೪೭೭೯೦ |
| ೭. ಬಾದಾಮಿ | ೨೩೬ | ೬೭೬ | ೮೯೦೪೭ | ೧೦೨೯೧೦ |
| ೮. ಹುನಗುಂದ | ೨೧೭ | ೫೧೮ | ೮೦೦೩೭ | ೧೨೧೦೫೦ |
| ಒಟ್ಟು | ೧೩೩೪ | ೫೭೫೭ | ೬೩೪೮೪೯೩ | ೧೨೦೦೯೭೦ |

### ೨. ಬೆಳಗಾವೀ ಜಿಲ್ಲೆ.

| ತಾಲೂಕುಗಳು. | ಗ್ರಾಮುಗಳು | ಕ್ಷೇತ್ರಫಲ | ಜನಸಂಖ್ಯೆ | ವಸೂಲು |
|---|---|---|---|---|
| ೧. ಅಥಣಿ | ೮೨ | ೭೮೬ | ೧೦೫೯೬೧ | ೧೫೮೬೨೦ |
| ೨. ಚಿಕ್ಕೋಡಿ | ೨೧೫ | ೮೪೦ | ೨೪೫೬೧೪ | ೨೬೧೪೪೦ |
| ೩. ಗೋಕಾವಿ | ೧೨೦ | ೬೭೦ | ೯೩೦೨೯ | ೧೩೧೪೪೦ |
| ೪. ಪರಸಗಡ | ೧೩೩ | ೬೪೦ | ೯೧೩೨೬ | ೧೮೭೪೪೦ |
| ೫. ಸಂಪಗಾವಿ | ೧೪೦ | ೪೨೪ | ೧೧೯೮೪೩ | ೨೩೯೧೩೦ |
| ೬. ಬೆಳಗಾವಿ | ೨೦೩ | ೬೬೩ | ೧೨೮೪೭೭ | ೧೫೦೪೧೦ |
| ೭. ಖಾನಾಪುರ | ೨೪೦ | ೬೩೩ | ೭೯೨೬೪ | ೧೧೩೦೮೦ |
| ಒಟ್ಟು | ೧೧೩೩ | ೪೬೫೬ | ೮೬೪೦೧೪ | ೧೨೪೧೫೬೦ |

## ೩. ಧಾರವಾಡ ಜಿಲ್ಲೆ.

| ತಾಲೂಕುಗಳು. | ಗ್ರಾಮಗಳು ಇನಾಮಿ ಬೇಚಿರಾಖ ಸಹಿತ. | ಕ್ಷೇತ್ರಫಲ ಚ. ಮೈ. | ಜನಸಂಖ್ಯೆ ೧೮೮೧. | ವಸೂಲು ೧೮೮೧. |
|---|---|---|---|---|
| ೧. ಧಾರವಾಡ . . . . . . | ೨೧೩ | ೪೨೫ | ೧೧೧೧೩೭ | ೨೭೭೦೫೦ |
| ೨. ಕಲಘಟಗಿ . . . . . . | ೧೪೧ | ೨೭೯ | ೫೦೭೬೯ | ೧೨೯೮೫೦ |
| ೩. ಹುಬ್ಬಳ್ಳಿ. . . . . . | ೯೪ | ೩೧೧ | ೯೧೯೯೭ | ೨೬೦೫೬೦ |
| ೪. ನವಲಗುಂದ . . . . . | ೯೭ | ೫೬೨ | ೮೭೮೩೨ | ೩೮೨೮೬೦ |
| ೫. ರೋಣ . . . . . . | ೭೪ | ೩೭೦ | ೬೦೭೨೪ | ೧೬೪೪೭೦ |
| ೬. ಗದಗು . . . . . . | ೧೨೮ | ೬೯೯ | ೧೦೦೩೩೩ | ೨೫೭೪೦೦ |
| ೭. ಕರ್ಜಗಿ . . . . . . | ೧೪೭ | ೪೪೨ | ೮೩೨೧೬ | ೧೯೨೩೨೦ |
| ೮. ಬಂಕಾಪುರ . . . . . . | ೧೭೧ | ೩೪೩ | ೭೬೫೫೪ | ೧೯೮೭೫೦ |
| ೯. ಹಾನಗಲ್ಲು . . . . . . | ೨೧೧ | ೨೯೮ | ೬೫೭೮೭ | ೧೮೪೪೯೦ |
| ೧೦. ಕೋಡ . . . . . . | ೨೦೪ | ೪೦೦ | ೮೦೩೪೫ | ೧೮೬೬೩೦ |
| ೧೧. ರಾಣೇಬಿನ್ನೂರು. . . . . | ೧೪೩ | ೪೦೫ | ೭೪೨೧೩ | ೧೫೮೦೪೦ |
| ಒಟ್ಟು . . . | ೧೬೨೩ | ೪೫೩೪ | ೮೮೨೯೦೭ | ೨೩೯೨೪೨೦ |

## ೪. ಕಾನಡಾ ಜಿಲ್ಲೆ.

| | | | | |
|---|---|---|---|---|
| ೧. ಕಾರವಾಡ . . . . . . | ೨೩೧ | ೨೮೧ | ೪೭೭೪೨ | ೧೧೦೭೧೦ |
| ೨. ಅಂಕೋಲಾ . . . . . | ೧೯೫ | ೩೬೭ | ೩೪೧೮೯ | ೯೬೬೬೦ |
| ೩. ಕುಮಟಾ . . . . . | ೪೫೭ | ೨೩೦ | ೫೮೭೫೮ | ೧೨೧೨೨೦ |
| ೪. ಹೊನ್ನಾವರ. . . . . . | ೭೪೬ | ೪೪೬ | ೮೫೬೨೫ | ೧೫೯೭೨೦ |
| ೫. ಸುಪಾ (ಹಳ್ಯಾಳ) . . . . | ೪೫೭ | ೯೫೭ | ೬೧೧೫೪ | ೧೦೬೬೯೦ |
| ೬. ಯಲ್ಲಾಪುರ . . . . . . | ೩೦೫ | ೫೮೯ | ೩೬೩೧೪ | ೯೫೫೯೦ |
| ೭. ಸಿರಸಿ . . . . . . | ೭೫೧ | ೭೭೯ | ೬೨೪೦೦ | ೧೭೧೭೬೦ |
| ೮. ಸಿದ್ದಾಪುರ . . . . . . | ೬೮೫ | ೨೩೯ | ೩೫೬೫೮ | ೯೦೫೪೦ |
| ಒಟ್ಟು . . . | ೩೮೨೬ | ೩೯೧೦ | ೪೨೧೮೪೦ | ೯೫೨೮೯೦ |
| ೪ ಜಿಲ್ಲೆಗಳ ಒಟ್ಟು . . . | ೭೯೧೬ | ೧೭೮೫೭ | ೨೮೦೭೨೫೪ | ೫೭೮೭೮೪೦ |

ಭೂಮಿಯ ಸ್ವರೂಪವು.— ಈ ಕರ್ನಾಟಕ ಭಾಗದ ಭೂಮಿಯು ಒಂದೇ ಸವ

ಸ್ವರೂಪ

ನಾಗಿರುವದಿಲ್ಲ. ಸಹ್ಯಾದ್ರಿಯಿಂದ ಇದರ ಸ್ವರೂಪವು ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆ ತರದ್ದಾಗಿರುತ್ತದೆ. ಈ ಪರ್ವತಾವಳಿಯು ಈ ಪ್ರಾಂತದ ದಕ್ಷಿಣ ಭಾಗದೊಳಗಿಂದ, ಅಂದರೆ ಕಾನಡಾ ಜಿಲ್ಲೆಯೊಳಗಿಂದ, ಉತ್ತರಕ್ಕೆ ಹೋಗುತ್ತದೆ. ಕಾನಡಾ ಜಿಲ್ಲೆಯನ್ನು ದಾಟಿದ ಒಳಿಕ ಮುಂದೆ ಉತ್ತರಕ್ಕೆ ಹೋದ ಹಾಗೆ ಈ ಕರ್ನಾಟಕ ಭಾಗವು ಸಹ್ಯಾದ್ರಿಯಿಂದ ಪೂರ್ವಕ್ಕೆ ಹೆಚ್ಚು ಹೆಚ್ಚು ದೂರಾಗುತ್ತ ಹೋಗುತ್ತದೆ. ಅದರಿಂದ ಈ ಪ್ರಾಂತದ ಭೂಮಿಯಲ್ಲಿ ನಾಲ್ಕು ಮುಖ್ಯ ಪ್ರಕಾರಗಳಾಗಿರುತ್ತವೆ. ಅವು ಯಾವವೆಂದರೆ— ೧ ಸಹ್ಯಾದ್ರಿಯ ಪಶ್ಚಿಮಕ್ಕಿರುವ ಸಮುದ್ರ ತೀರದ ತಗ್ಗು ಪ್ರದೇಶ, ಅಥವಾ ಕೊಂಕಣ, ೨ ಸಹ್ಯಾದ್ರಿಯ ಪ್ರದೇಶ, ಅಥವಾ ಮಲ್ನಾಡ,* ೩ ಸಹ್ಯಾದ್ರಿಯ ನೆರೆಪ್ರದೇಶ, ಅಥವಾ ಮಲ್ನಾಡದ ಶರಗು, ೪ ಬೈಲು ಶೀಮೆ, ಅಥವಾ ಬೆಳುವಲು.

೧. ಸಮುದ್ರ ತೀರದ ತಗ್ಗು ಪ್ರದೇಶ, ಅಥವಾ ಕೊಂಕಣ.— ಇದು ಕಾನಡಾ ಜಿಲ್ಲೆಯ ಪಶ್ಚಿಮ ಭಾಗವಾಗಿದೆ. ಇದರಲ್ಲಿ ಹೊನ್ನಾವರ, ಕುಮಟಾ, ಅಂಕೋಲೆ, ಕಾರವಾಡ, ಯೆಂಬ ನಾಲ್ಕು ತಾಲೂಕುಗಳಿವೆ. ಸಮುದ್ರ ತೀರವು ಸ್ವಲ್ಪ ವಕ್ರವಾಗಿ ದಕ್ಷಿಣೋತ್ತರ ೭೬ ಮೈಲುದ್ದ ಇರುತ್ತದೆ. ಇದರಲ್ಲಿ ಕಾರವಾಡ, ಬೇಲಿಕೇರಿ, ಯೆಂಬೆರಡು ಸಣ್ಣ ಆಖಾತಗಳಿವೆ; ಅಲ್ಲಲ್ಲಿಗೆ ಸಣ್ಣ ಸಣ್ಣ ನಡುಗಡ್ಡೆಗಳಿಂದಲೂ, ಭೂಶಿರಗಳಿಂದಲೂ, ಹೊಳೆಗಳ ಮುಖಗಳಿಂದಲೂ, ತೆಂಗಿನ ಬನಗಳುಳ್ಳಂಥ ಉಸುಬಿನ ಬೈಲುಗಳಿಂದಲೂ ಈ ಸಮುದ್ರ ತೀರವು ಚಿತ್ರ ವಿಚಿತ್ರವಾಗಿರುತ್ತದೆ. ದಂಡೆಯ ಹಿಂಬದಿಯಲ್ಲಿ ನಿಬಿಡವಾದ ಅರಣ್ಯಗಳೂ ಯೆತ್ತರವಾದ ಶಿಖರಗಳೂ ಮನೋಹರವಾಗಿ ಶೋಭಿಸುತ್ತವೆ. ಕಾರವಾಡದ ಯೆದುರಿನಲ್ಲಿ ಅಂಜನೀ ದ್ವೀಪ, ಹೊನ್ನಾವರದ ಎದುರಿಗೆ ಬಸವರಾಜದುರ್ಗ, ಅದರ ದಕ್ಷಿಣಕ್ಕೆ ಜಾಲೀಕೊಂಡವೆಂಬ ಶಿಖರ, ಇವೇ ಮುಖ್ಯ ನಡುಗಡ್ಡೆಗಳು. ಕಾರವಾಡದ ಹತ್ತರದಲ್ಲಿ ಕಾಳೀ ನದಿಯ ಮುಖ, ಗೋಕರ್ಣದ ಉತ್ತರದಲ್ಲಿ ಗಂಗಾವಳಿಯ ಮುಖ, ಹೊನ್ನಾವರದ ಹತ್ತರದಲ್ಲಿ ಶರಾವತಿಯ ಮುಖ, ಇವೇ ಮುಖ್ಯ ನದೀಮುಖಗಳು.

ಕಾರವಾಡದ ದಕ್ಷಿಣ ನೆರೆಯಲ್ಲಿ ಸಹ್ಯಾದ್ರಿಯ ೧೭೦೦ ಫೂಟು ಯೆತ್ತರವಾದ ಶಿಖರಗಳು ಸಮುದ್ರತೀರಕ್ಕೆ ಹೊಂದಿರುತ್ತವೆ. ಅಲ್ಲಿಂದ ದಕ್ಷಿಣಕ್ಕೆ ಈ ಕೊಂಕಣ ಪಟ್ಟಿಯು ಕೆಲವು ಕಡೆಯಲ್ಲಿ ಹತ್ತೆಂಟು ಮೈಲು ಮಾತ್ರ ಅಗಲಾಗಿಯೂ ಕೆಲವು ಕಡೆಯಲ್ಲಿ ೨೦ರಿಂದ ೨೫ ಮೈಲುಗಳ ವರೆಗೆ ಅಗಲಾಗಿಯೂ ಇರುತ್ತದೆ. ಇದೆಲ್ಲ ವಿಶೇಷವಾಗಿ ಉಸುಬಿನ ಭೂಮಿಯೇ, ಕೆಲವು ಕಡೆಯಲ್ಲಿ ಗರಸಿನ ನೆಲವು ಇರುತ್ತದೆ. ಸಮುದ್ರದ ನೀರು ಬಾರದಿದ್ದಲ್ಲಿ ಹೊಳೆಗಳ ದಂಡೆಯಲ್ಲಿಯೂ, ಅಲ್ಪ ಸ್ವಲ್ಪವಾಗಿ ಬೇರೆ ಕಡೆಯಲ್ಲಿಯೂ ಮಣ್ಣಿನ ಭೂಮಿಯನ್ನು ಕಾಣ ಬಹುದು. ಅಲ್ಲಲ್ಲಿಗೆ ಅಗಲಾದ ನದೀ ಮುಖಗಳೂ ಗುಡ್ಡಗಳೂ ಇರುವವರಿಂದ ಪ್ರವಾಸವು ಬಹು ಕಷ್ಟವಾಗುತ್ತದೆ; ಬಂಡಿ

* ಮಲೆನಾಡು ; ಮಲೆ, ಗುಡ್ಡ.

ಗಳಂತು ಸಾಗುವದೇ ಇಲ್ಲ; ತೆಂಗಿನ ಬನಗಳು ಬಹಳ; ಸಹ್ಯಾದ್ರಿಯ ಅಡವಿಯಲ್ಲಿ ತೇಗು ಮತ್ತಿ, ಹಲಸು, ಮುಂತಾದ ಮರಗಳು ಯೆತ್ತರವಾಗಿ ಬೆಳಿಯುತ್ತವೆ. ಕೆಂಪು ಭೂಮಿ ಇದ್ದಲ್ಲಿ ತೋಟಗಳೂ ಬತ್ತದ ಗದ್ದೆಗಳೂ ಸೊಬಗಿನಿಂದ ಮೆರೆಯುತ್ತಿರುತ್ತವೆ.

೨. ಸಹ್ಯಾದ್ರಿಯ ಪ್ರದೇಶ, ಅಥವಾ ಮಲ್ಲಾಡ.— ಕಾನಡಾ ಜಿಲ್ಲೆಯ ಮಧ್ಯ ಭಾಗದಲ್ಲಿ ಅಂದರೆ ಕೊಂಕಣ ಪಟ್ಟಿಯ ಪೂರ್ವ ನೆರೆಯಲ್ಲಿ ಸಹ್ಯಾದ್ರಿಯ ಸಾಲು ದಕ್ಷಿಣೋತ್ತರವಾಗಿ ಇರುತ್ತದೆ. ಇದಕ್ಕೆ ಪಶ್ಚಿಮ ಘಟ್ಟವೆಂತಲೂ ಅನ್ನುವರು. ಈ ಪರ್ವತಾವಳಿಯು ಕಾನಡಾ ಜಿಲ್ಲೆಯ ಉತ್ತರದಲ್ಲಿ ಗೋಮಂತಕ ಪ್ರಾಂತದೊಳಗಿಂದ ಮಹಾರಾಷ್ಟ್ರ ದೇಶವನ್ನು ಶೇರುತ್ತದೆ. ಬೆಳಗಾವೀ ಜಿಲ್ಲೆಯಲ್ಲಿ ಇದರ ಪೂರ್ವದ ಅಂಚು ಅಲ್ಪ ಸ್ವಲ್ಪ ಬಂದಿರುತ್ತದೆ. ಈ ಪರ್ವತಾವಳಿಯ ಸರಾಸರೀ ಎತ್ತರ ೨೦೦೦ ಫೂಟು; ಕೆಲವು ಶಿಖರಗಳು ೩೦೦೦ ಫೂಟಿನ ವರೆಗೆ ಇರುತ್ತವೆ. ಈ ಮಲ್ಲಾಡದ ಪ್ರದೇಶದಲ್ಲಿ ಮಂಜಾಣಾದ ಅಡವಿಯು ಹಬ್ಬಿರುತ್ತದೆ. ಅದನ್ನು ಮುಂದೆ ವಿವರಿಸುವ. ಆದರೆ ಬೆಳಗಾವೀ ಜಿಲ್ಲೆಯೊಳಗಿನ ಮಲ್ಲಾಡ ಭಾಗದ ಅಡವಿಯು ಅಷ್ಟು ಭವ್ಯವಾದದ್ದಲ್ಲ. ಮಲ್ಲಾಡದ ಅಡವಿಯಲ್ಲಿ ಗ್ರಾಮಗಳೂ ಒಕ್ಕಲತನಕ್ಕೆ ಶೇರಿದ ಭೂಮಿಯೂ ಬಹುತರ ಇಲ್ಲ; ಕಾಡು ಜನರು ಮಾತ್ರ ಹಲಕೆಲವು ಕಡೆಯಲ್ಲಿ ವಾಸಿಸುತ್ತಾರೆ. ಹುಲಿ, ಕರಡಿ ಮುಂತಾದ ಕಾಡುಮಿಕಗಳು ಈ ಅಡವಿಯಲ್ಲಿ ಮನೆ ಮಾಡಿಕೊಂಡಿರುತ್ತವೆ. ಸಹ್ಯಾದ್ರಿಯ ನೆತ್ತಿಯಿಂದ ಪೂರ್ವದ ಇಳಕಲನ್ನು ಇಳಿಯುತ್ತ ಬಂದ ಹಾಗೆ ಅಡವಿಯು ಬೈಲಾಗುತ್ತದೆ; ಸಣ್ಣ ಸಣ್ಣ ಹಳ್ಳಿಗಳನ್ನೂ ಹಸನಾದ ಭೂಮಿಯನ್ನೂ ನೋಡ ಬಹುದು.

೩. ಸಹ್ಯಾದ್ರಿಯ ನೆರೆಪ್ರದೇಶ, ಅಥವಾ ಮಲ್ಲಾಡದ ಶರಗು.— ಕಾನಡಾ ಜಿಲ್ಲೆಯ ಇಡೀ ಪೂರ್ವ ಭಾಗ, ಅಂದರೆ ಘಟ್ಟದ ಮೇಲಿನ ಸಿದ್ದಾಪುರ, ಶಿರಸಿ, ಹಲ್ಯಾಳ, ಯಲ್ಲಾಪುರ, ಯೆಂಬ ನಾಲ್ಕು ತಾಲೂಕುಗಳು; ಧಾರವಾಡ ಜಿಲ್ಲೆಯ ಪಶ್ಚಿಮದ ಸಣ್ಣ ಭಾಗ, ಅಂದರೆ ಕೋಡ, ಹಾನಗಲ್ಲು, ಕಲಘಟಗಿ, ಹುಬ್ಬಳ್ಳಿ, ಧಾರವಾಡ, ಯೆಂಬ ಐದು ತಾಲೂಕುಗಳು; ಬೆಳಗಾವೀ ಜಿಲ್ಲೆಯ ನೈಋತ್ಯಭಾಗ, ಅಂದರೆ ಖಾನಾಪುರ, ಸಂಪಗಾವಿ, ಬೆಳಗಾವಿ, ಎಂಬ ಮೂರು ತಾಲೂಕುಗಳು; ಇಷ್ಟೆಲ್ಲ ಪ್ರದೇಶವು ಮಲ್ಲಾಡದ ಶರಗೆಂದು ಹೇಳ ಬಹುದು. ಬೆಳಗಾವೀ ತಾಲೂಕಿನ ಪಶ್ಚಿಮ ಅಂಚು ಅಚ್ಚ ಮಲ್ಲಾಡವೇ ಇರುತ್ತದೆ. ಚಿಕ್ಕೋಡೀ ತಾಲೂಕಿನ ಪಶ್ಚಿಮ ಭಾಗವನ್ನು ಮಲ್ಲಾಡದ ಶರಗಿನೊಳಗೆ ಎಣಿಸ ಬಹುದು. ಈ ಪ್ರದೇಶವು ಪೂರ್ವಕ್ಕೆ ಇಳಕಲಾಗಿ, ಸಮುದ್ರಕ್ಕಿಂತ ಸುಮಾರು ೧೫೦೦ ಫೂಟು ಎತ್ತರಿರುತ್ತದೆ. ಇದರ ಪಶ್ಚಿಮ ಭಾಗದಲ್ಲಿ ಅಲ್ಪ ಸ್ವಲ್ಪ ಅಡವಿಯುಂಟು ಅದು ಪೂರ್ವಕ್ಕೆ ಹೋದ ಹಾಗೆ ಕಡಿಮೆಯಾಗುತ್ತದೆ. ಪಶ್ಚಿಮ ಭಾಗದ ಹಳ್ಳಿಗಳು ಬಹಳ ಸಣ್ಣವು, ಅವುಗಳಲ್ಲಿ ಮರಗಳು ವಿಶೇಷ, ಮನೆಗಳ ಮಾಳಿಗೆಗಳು ಹಂಚಿನವು. ಆದರೆ ಪೂರ್ವಕ್ಕೆ ಸಾಗಿದ ಹಾಗೆ ಈ ಸ್ವರೂಪವು ಬದಲಾಗುತ್ತದೆ; ಹಳ್ಳಿಗಳು ಬರ ಬರುತ್ತ ದೊಡ್ಡವಾಗುತ್ತವೆ, ಅವುಗಳಲ್ಲಿ ಮರಗಳ ದಟ್ಟಣೆ ಕಡಿಮೆ, ಹಲಕೆಲವು ಮೇಲು ಮುದ್ದೆಯ ಮಾಳಿಗೆಗಳನ್ನು ನೋಡಬಹುದು. ಈ ಮಲ್ಲಾಡದ ಶರಗಿನಲ್ಲಿ ಜೂನ ತಿಂಗ

ಳಿಂದ ಫೆಬ್ರುವರಿಯ ವರೆಗೆ ಅಡವಿಯಲ್ಲಿ ಹಸುರು ಸಸಿಗಳಿರುತ್ತವೆ. ಸಣ್ಣ ದೊಡ್ಡ ಗುಡ್ಡಗಳು ಬಹುತರ ಯೆಲ್ಲ ಕಡೆಯಲ್ಲಿರುತ್ತವೆ. ಅದರಿಂದ ಭೂಮಿಯು ತಗ್ಗು ದಿನ್ನೆ ಯಾಗಿರುವದು. ದಿನ್ನೆಗಳಲ್ಲಿ ಗರಸಿನ ನೆಲವೇ ವಿಶೇಷ. ತಗ್ಗಿನ ಪ್ರದೇಶಗಳಲ್ಲಿ ತಕ್ಕ ಮಟ್ಟಿಗೆ ಕಸುವುಳ್ಳಂಥ ಕೆಂಪು ಮಣ್ಣಿನ ಭೂಮಿಯು ಸರುವುಗಳ ಎಡಬಲಗಳಲ್ಲಿಯೂ ಮಡುವುಗಳ ದಂಡೆಗಳಲ್ಲಿಯೂ ವಿಪುಲವಾಗಿರುವದು. ಪೂರ್ವಕ್ಕೆ ಬಂದ ಹಾಗೆ ಕೆಂಪು ಭೂಮಿಯು ಕರೆ ನೆಲದ ಸ್ವರೂಪವನ್ನು ಹೊಂದುತ್ತದೆ. ಒಂದೇ ಹೊಲದಲ್ಲಿ ಕೆಲವು ಭಾಗ ಕೆಂಪು ಮಂಣು, ಕೆಲವು ಭಾಗ ಯೆರೆಮಣ್ಣು ಇರುವದು ಅಪರೂಪವಲ್ಲ. ಕುಮುದ್ವತಿ, ಧರ್ಮಾ, ವರದಾ, ಮಲಾಪಹಾರಿ, ಮಾರ್ಕಂಡೇಯಿ, ಹಿರಣ್ಯಕೇಶಿ, ಯೆಂಬ ಹೊಳೆಗಳು ಈ ಪ್ರದೇಶದಲ್ಲಿ ಹರಿಯುತ್ತವೆ. ಇವುಗಳ ತೀರದ ಭೂಮಿಯು ಹೆಚ್ಚು ಫಲವುಳ್ಳದ್ದು.

೪. ಬೈಲು ಶೀಮೆ, ಅಥವಾ ಬೆಳುವಲು.—ಮುಂಬಯಿ ಇಲಾಖೆಗೆ ಶೇರಿದ ಕರ್ನಾಟಕ ಭಾಗದಲ್ಲಿ ಈ ಬೈಲು ಶೀಮೆಯೇ ಎಲ್ಲಕ್ಕೂ ದೊಡ್ಡದಿರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಮಲ್ಲಾಡದ ಶರಗಿನ ೫ ತಾಲೂಕುಗಳ ಹೊರ್ತು ಉಳಿದ ೬ ತಾಲೂಕುಗಳು, ಬೆಳಗಾವೀ ಜಿಲ್ಲೆಯೊಳಗಿನ ಅಂಥಾ ಮೂರು ತಾಲೂಕುಗಳ ಹೊರ್ತು ಉಳಿದ ೪ ತಾಲೂಕುಗಳು, ಇಡೀ ವಿಜಾಪುರ ಜಿಲ್ಲೆ, ಇಷ್ಟೆಲ್ಲ ಭಾಗವು ಬೈಲು ಶೀಮೆ ಇರುತ್ತದೆ. ಈ ಬೈಲು ಶೀಮೆಯು ಉತ್ತರ ಕರ್ನಾಟಕದ ಪಶ್ಚಿಮ ಭಾಗವವೆ; ಪೂರ್ವ ಭಾಗವು ನಿಜಾಮನ ರಾಜ್ಯಕ್ಕೆ ಶೇರಿರುತ್ತದೆ. ದಕ್ಷಿಣದಲ್ಲಿ ಬಳ್ಳಾರೀ ಜಿಲ್ಲೆಯ ಪಶ್ಚಿಮ ಭಾಗ, ಮೈಸೂರು ಶೀಮೆ ಯಾವತ್ತು, ಇವಾದರೂ ಕರ್ನಾಟಕದ ಭಾಗಗಳೇ ಇರುತ್ತವೆ. ಕರ್ನಾಟಕ ದೇಶದಲ್ಲೆಲ್ಲ ಕರೆ ಭೂಮಿಯೇ ವಿಶೇಷವಾಗಿ ಇದ್ದದರಿಂದ ಇದಕ್ಕೆ "ಕರ್ನಾಡ್" ಅಥವಾ "ಕನ್ನಡ" ಎಂಬ ಹೆಸರು ಬಂದಿದೆ. ತಾತ್ಪರ್ಯವೇನೆಂದರೆ—ಕನ್ನಡವೆಂಬ ಹೆಸರಿನ ಅರ್ಥಕ್ಕೆ ಸರಿಯಾಗಿ ಬೈಲು ಶೀಮೆಯಲ್ಲಿ ಕರೆ ಭೂಮಿಯೇ ವಿಶೇಷವಾಗಿ ಇರುತ್ತದೆ. ಗುಡ್ಡಗಳು ಬಹು ಕಡಿಮೆ. ಧಾರವಾಡ ಜಿಲ್ಲೆಗೆ ಶೇರಿದ ಬೈಲು ಶೀಮೆಯ ಭಾಗದಲ್ಲಿ ಗುಡ್ಡಗಳು ಅಲ್ಪ ಸ್ವಲ್ಪ ಇರುತ್ತವೆ; ಬೆಳಗಾವೀ ಜಿಲ್ಲೆಯ ಭಾಗದಲ್ಲಿ ಅದಕ್ಕೂ ಕಡಿಮೆ; ವಿಜಾಪುರದ ಜಿಲ್ಲೆಯಲ್ಲಿ ಎಲ್ಲಕ್ಕೂ ಕಡಿಮೆ. ಅಡವಿಯಲ್ಲಿಯೂ ಗ್ರಾಮುಗಳಲ್ಲಿಯೂ ವೃಕ್ಷಗಳ ಛಾಯೆ ದುರ್ಲಭವು. ಭೂಮಿಯು ಸವನೆಲವುಳ್ಳದ್ದು, ಇಲ್ಲವೆ ತೆರೆಗಳ ಹಾಗೆ ಏರಿಳಿತಗಳುಳ್ಳದ್ದು. ಎತ್ತರ ಪ್ರದೇಶಗಳಲ್ಲಿ ಗರಸಿನ ಭೂಮಿಯನ್ನು ಕಾಣಬಹುದು. ಬೈಲಲ್ಲಿ ನಿಂತು ಸುತ್ತುಮುತ್ತು ನೋಡುವವನಿಗೆ ಕ್ಷಿತಿಜದ ವರ್ತುಲವು ಅವಿಚ್ಛಿನ್ನವಾಗಿ ಕಾಣಿಸಲಿಕ್ಕೆ ಅಡ್ಡಿ ಇಲ್ಲ. ಎತ್ತನೋಡಿದತ್ತ ಬೈಲೇ ಬೈಲು. ಮಧ್ಯಾಹ್ನದ ಬಿಸಿಲಿನಲ್ಲಿ ಅಡವಿಯು ಬೇಗೆ ಹತ್ತಿದಂತೆ ಕಾಣಿಸುತ್ತದೆ. ಬಾಯಾರಿಕೆಯಿಂದ ಬಳಲಿ ನೀರು ಹುಡುಕುವ ಮಾರ್ಗಸ್ಥನನ್ನು ಬಿಸಿಲ್ಗುದುರೆಯು ಭ್ರಮೆಗೊಳಿಸಿ ಮತ್ತಿಷ್ಟು ದಣಿಸುತ್ತದೆ. ದೂರಿಂದ ಕಾಣಿಸುವ ಗ್ರಾಮುಗಳು ಸುಟ್ಟಂತೆ ತೋರುತ್ತವೆ. ಅವುಗಳಲ್ಲಿ ಮರಗಳು ಇರುವದೇ ಇಲ್ಲ; ಬೇವು, ಅರಳೆ, ಜಾಲಿ, ಇಂಥಾ ಮರಗಳೊಂದೆ

ರಡಿದ್ದರೆ ಸುದೈವವು. ಮನೆಗಳ ಗೋಡೆಗಳು ಕಲ್ಲಿನವು; ಅವುಗಳ ಮೇಲೆ ಗಿಲಾಯ, ಇಲ್ಲವೆ ಸುಣ್ಣ ಮುಂತಾದ ಸಾರಣೆ ಇಲ್ಲದ್ದರಿಂದ ಅವು ಹಾಳು ಗೋಡೆಗಳ ಹಾಗೆ ಕಾಣಿಸುವವು. ಮಾಳಿಗೆಗಳೆಲ್ಲ ಮೇಲುಮುದ್ದೆಯವು; ಹಂಚಿನ ಮಾಳಿಗೆಯು ಇಲ್ಲವೇ ಇಲ್ಲ. ದೂರಿಂದ ಮಾಳಿಗೆಗಳು ಕಾಣಿಸದೆ ಬರೀ ಗೋಡೆಗಳೇ ಕಾಣಿಸುವದರಿಂದ ಊರೆಲ್ಲ ಹಾಳುಬಿದ್ದಂತೆ ಭಾಸವಾಗುತ್ತದೆ. ಮಧ್ಯಾಹ್ನದ ಬಿಸಿಲಿನಲ್ಲಂತು ಸುತ್ತುಮುತ್ತಲಿನ ಗ್ರಾಮುಗಳು ಸದ್ಯಕ್ಕೆ ಸುಡುತ್ತವೆಂದು ಪಾಂಥಸ್ಥನು ಭ್ರಮೆಗೊಳ್ಳುತ್ತಾನೆ. ಈ ಬೈಲು ಶೀಮೆಯಲ್ಲಿ ಕುಡಿಯುವ ನೀರಿನ ದುರ್ಭಿಕ್ಷವು ನದೀತೀರದಲ್ಲಿ ಮಾತ್ರ ಇರುವದಿಲ್ಲ. ಹಳ್ಳಿಗಳ ಜನರು ನೀರಿಗಾಗಿ ಎರಡೆರಡು ಹರದಾರಿ ಹೋಗುವದು ಅಪರೂಪವಲ್ಲ. ಅವರ ಮೈ ಮೇಲಿನ ಬಟ್ಟೆಗಳಿಗೆ ಕರೆ ಮಣ್ಣಿನ ಪುಟ ಕೊಟ್ಟಂತೆ ಕಾಣುತ್ತಿರುತ್ತದೆ. ಮಾರ್ಗಸ್ಥರನ್ನು ನೀರಡಿಕೆಯು ದೊಡ್ಡ ಗಂಡಾಂತರದಂತೆ ಬಾಧಿಸುತ್ತದೆ. ಆದರೆ ಈ ಶೀಮೆಯ ಹವೆಯು ಬಹು ಆರೋಗ್ಯವಾದದ್ದು; ಭೂಮಿಯು ಚಿನ್ನಕ್ಕೆ ಸರಿಯಾದದ್ದೆಂದರೆ ಬಹಳ ತಪ್ಪಾಗದು. ಈ ಬೈಲು ಶೀಮೆಯ ಕರೆ ಭೂಮಿಗೆ ಬೇಕಾದ ಹಾಗೆ ಮಳೆ ಆದರೆ ವೊಕ್ಕಲಿಗನು ಕುಬೇರನಾಗುವನು. ಆದರೆ ಈ ಬೈಲು ಶೀಮೆಯ ಉತ್ತರ ಭಾಗವು, ಅಂದರೆ ವಿಜಾಪುರದ ಉತ್ತರಕ್ಕಿರುವ ಪ್ರದೇಶವು ತೀರ ಕಡಿಮೆ ಕಸುವುಳ್ಳದ್ದು. ಅಲ್ಲಿಯ ಭೂಮಿಯಲ್ಲಿ ಯೇರಿಳತಗಳು ಬಹಳ. ಮಾರ್ಗಸ್ಥನು ಮರಗಳ ನೆರಳನ್ನೂ ಜಲಾಶಯಗಳನ್ನೂ ಕಾಣದೆ, ದಿನ್ನೆಗಳನ್ನು ಏರುತ್ತಾ ತಗ್ಗಿನೊಳಗೆ ಇಳಿಯುತ್ತಾ ಮಾರ್ಗವನ್ನು ಕ್ರಮಿಸಲಿಕ್ಕೆ ಬಹು ಬೇಗ ಬೇಸರುವನು. ದಿನ್ನೆಗಳೆಲ್ಲ ಹೆಚ್ಚಾಗಿ ಮರಡಿ ಸಾಲುಗಳೇ; ವಿಸ್ತಾರವಾದ ಕಲ್ಲಿನ ಹಾಸಿಗೆಗಳನ್ನು ಅಲ್ಲಲ್ಲಿಗೆ ಕಾಣ ಬಹುದು. ತಗ್ಗಿನ ಭೂಮಿಯಲ್ಲಿ ಮಾತ್ರ ಅಲ್ಪ ಸ್ವಲ್ಪ ಬೆಳೆ ಬರುವದು — ಒಕ್ಕಲಿಗನು ಇಡೀ ವರ್ಷ ಕಷ್ಟ ಪಟ್ಟಾಗ್ಯೂ ಅವನ ಕುಟುಂಬಕ್ಕೆ ಸಾಲುವಷ್ಟು ಪೈರು ಬರುವದು ದುರ್ಲಭವು.

## ಗುಡ್ಡಗಳು.

ಕಾನಡಾ ಜಿಲ್ಲೆಯ ಮಧ್ಯ ಭಾಗದಲ್ಲಿ ಸಹ್ಯಾದ್ರಿಯ ಸಾಲು ಇರುವದರಿಂದ ಆ ಜಿಲ್ಲೆಯ ಕೊಂಕಣ ಭಾಗದಲ್ಲಿಯೂ ಘಟ್ಟದ ಮೇಲಿನ ಪ್ರದೇಶದಲ್ಲಿಯೂ ಗುಡ್ಡಗಳು ಬಹಳ ಇರುತ್ತವೆ. ಸಹ್ಯಾದ್ರಿಯ ಪಶ್ಚಿಮ ಪಾರ್ಶ್ವವು ಬೇರೆ ಯೆಷ್ಟೋ ಕಡೆಯಲ್ಲಿ ಇರುವಂತೆ ಕಾನಡಾ ಜಿಲ್ಲೆಯಲ್ಲಿ ಗೋಡೆಯಂತೆ ನಿಡಿದಾಗಿ ಮೇಲಕ್ಕೆ ಹೋಗಿರುವದಿಲ್ಲ. ಸಣ್ಣ ದೊಡ್ಡ ಗುಡ್ಡಗಳು ಆ ಪರ್ವತಕ್ಕೆ ಹೊಂದಿಕೊಂಡಿರುತ್ತವೆ; ಎಷ್ಟೋ ಕಡೆಯಲ್ಲಿ ಇಂಥಾ ಗುಡ್ಡಗಳ ಸಾಲುಗಳು ಸಮುದ್ರದ ವರೆಗೆ ಹಬ್ಬಿರುತ್ತವೆ. ಅವುಗಳಲ್ಲಿ ಮೋತೀ ಗುಡ್ಡ (೩೦೦೦ ಫೂ.), ತುಳಸೀ ಪರ್ವತ (೧೮೦೦ ಫೂ.) ಅಂಕೋಲಾ ತಾಲೂಕಿನಲ್ಲಿ, ಕಳತೀ ಗುಡ್ಡ (೨೫೦೦ ಫೂ.) ಹೊನ್ನಾವರ ತಾಲೂಕಿನಲ್ಲಿ, ಗುಡೆಹಳ್ಳೀ ಗುಡ್ಡ (೧೮೦೦ ಫೂ.), ಶಿರವೇ ಗುಡ್ಡ (೧೫೦೦ ಫೂ.) ಕಾರವಾಡ ತಾಲೂಕಿನಲ್ಲಿ, ಇತ್ಯಾದಿ ಶಿಖರಗಳು ಪ್ರಸಿದ್ಧ ಉಂಟು. ಕಳತೀ ಗುಡ್ಡ, ಗುಡೆಹಳ್ಳಿ ಇವೆರಡು ಆರೋಗ್ಯದ ಸ್ಥಳಗಳು. ಸದಾಶಿವ

ಗಡ, ಭಟಕಳದುರ್ಗ, ಮುಂತಾದ ಪುರಾತನದ ದುರ್ಗ ಕೋಟೆಗಳು ಕೆಲವಿರುತ್ತವೆ. ಸಹ್ಯಾದ್ರಿಯು ಮಧ್ಯಮಮಾನದಿಂದ ಸಮುದ್ರದ ಮೇಲೆ ೨೦೦೦ ಫೂಟು ಎತ್ತರವಿರುತ್ತದೆ. ಮೇಲೆ ಹೇಳಿದ ಮೋತೀ ಗುಡ್ಡದಂಥ ಕೆಲವು ಶಿಖರಗಳು ೩೦೦೦ ಫೂಟಿನ ವರೆಗೆ ಎತ್ತರ ಉಂಟು. ಸಹ್ಯಾದ್ರಿಯ ಪೂರ್ವಕ್ಕೆ ಸಣ್ಣ ದೊಡ್ಡ ಗುಡ್ಡಗಳು ಯೆಲ್ಲ ಕಡೆಯಲ್ಲಿಯೂ ಇರುತ್ತವೆ; ಕೆಲವು ಗುಡ್ಡಗಳ ಸಾಲುಗಳು ಯೆಷ್ಟೋ ಮೈಲುಗಳ ವರೆಗೆ ಹಬ್ಬಿರುವವು. ದರ್ಶನೀ ಗುಡ್ಡ (೩೦೦೦ ಫೂ.) ಸುಪೆ ತಾಲೂಕಿನಲ್ಲಿ, ಭೇಡ ಸಗಾವೀ ಗುಡ್ಡ (೨೫೦೦ ಫೂ.), ಮೆಣಶೀ ಗುಡ್ಡ (೨೦೦೦ ಫೂ.) ಶಿರಸೀ ತಾಲೂಕಿನಲ್ಲಿ, ಮಾವಿನಗುಂಡಿ (೧೬೦೦ ಫೂ.), ರಾಕ್ಷಸ (೧೬೦೦ ಫೂ.) ಸಿದ್ದಾಪುರ ತಾಲೂಕಿನಲ್ಲಿ, ಇವೇ ಮುಂತಾದ ಶಿಖರಗಳು ಪ್ರಸಿದ್ಧವುಂಟು.

ಧಾರವಾಡ ಜಿಲ್ಲೆಯಲ್ಲಿ ಐದು ಗುಡ್ಡ ಸಾಲುಗಳಿರುತ್ತವೆ. ಬುಡ್ಡನ ಗುಡ್ಡವೆಂಬ ಸಾಲು ಕಲಘಟಗಿ, ಹುಬ್ಬಳ್ಳೀ ತಾಲೂಕುಗಳ ನಡುವೆ ದಕ್ಷಿಣೋತ್ತರ ಸುಮಾರು ೮ ಮೈಲು ಉದ್ದವಾಗಿ ಹಬ್ಬಿರುತ್ತದೆ. ಇದರೊಳಗಿನ ಗುಡ್ಡಗಳು ೫೦೦ ಫೂಟಗಿಂತ ಯೆತ್ತರಿಲ್ಲ; ಇವುಗಳ ಮೇಲೆ ಹುಲ್ಲೂ ಸಣ್ಣ ಗಿಡಗಳೂ ಬೆಳೆದಿರುತ್ತವೆ. ಪಶ್ಚಿಮ ಪಾರ್ಶ್ವದಲ್ಲಿ ಕೆಲವು ಬನಗಳುಂಟು. ಐರಣೀ ಗುಡ್ಡವೆಂಬ ಸಾಲು ಆಗ್ನೇಯ ಮೂಲೆಯಲ್ಲಿ ಸುಮಾರು ೧೦ ಮೈಲುದ್ದ ಇರುತ್ತದೆ. ಆದರೆ ನಡುವೆ ಕೆಲವು ಮೈಲುಗಳ ವರೆಗೆ ಖಿಂಡಿಯುಂಟು. ತುಂಗಭದ್ರೆಯ ಧಡದಲ್ಲಿ ಐರಣೀ ಗ್ರಾಮದ ಹತ್ತರ ಈ ಸಾಲಿನೊಳಗಿನ ಎಲ್ಲಕ್ಕೂ ಎತ್ತರವಾದ ಗುಡ್ಡವು ೭೦೦ ಫೂಟು ಉನ್ನತವಿರುತ್ತದೆ. ಈ ಸಾಲಿನ ಎರಡೂ ಮಗ್ಗಲಿಗೆ ಕಿರಿ ಅಡವಿಯು ಹಬ್ಬಿರುತ್ತದೆ. ಕಪೋತ ಗುಡ್ಡವೆಂಬ ಸಾಲು ಪೂರ್ವ ಮೇರೆಯ ಹತ್ತರ ಗದಗಿನಿಂದ ತುಂಗಭದ್ರೆಯ ವರೆಗೆ ಆಗ್ನೇಯಕ್ಕೆ ಸುಮಾರು ೩೦ ಮೈಲುದ್ದ ಹಬ್ಬಿರುತ್ತದೆ. ಈ ಸಾಲಿನ ಮಧ್ಯ ಭಾಗದಲ್ಲಿರುವ ಗುಡ್ಡವು ೧೦೦೦ ಫೂಟು ಯೆತ್ತರವುಂಟು. ಅದರ ಆಗ್ನೆಯದಲ್ಲಿ ಮೂರು ನಾಲ್ಕು ಸಾಲುಗಳುಂಟಾಗಿ ಸುಮಾರು ೫ ಮೈಲು ಅಗಲಾದ ಪ್ರದೇಶವನ್ನು ಆಕ್ರಮಿಸಿ, ಕಡೆಯಲ್ಲಿ ತುಂಗಭದ್ರೆಯ ಹತ್ತರ ಒಟ್ಟುಗೂಡುತ್ತವೆ. ಕಪೋತ ಗುಡ್ಡದ ಸಾಲಿನ ಮೇಲೆ ಯಾವ ಪ್ರಕಾರದ ವೃಕ್ಷಾದಿಗಳೂ ಬೆಳೆಯುವದಿಲ್ಲ. ಈ ಗುಡ್ಡಗಳಲ್ಲಿ ಕಬ್ಬಿಣವೂ ಚಿನ್ನದ ಕಣಗಳೂ ದೊರೆಯುತ್ತವೆ. ಈ ಗುಡ್ಡ ಸಾಲು ದಾಟಲಿಕ್ಕೆ ನಾಲ್ಕು ಮಾರ್ಗಗಳಿರುತ್ತವೆ. ಆದರೆ ವ್ಯಾಪಾರವು ಈ ಮಾರ್ಗಗಳಿಂದ ನಡಿಯುವದಿಲ್ಲ. ಕೋಡ ತಾಲೂಕಿನಲ್ಲಿ ಎರಡು ಸಮಾಂತರ ಗುಡ್ಡ ಸಾಲುಗಳಿವೆ. ಅವುಗಳ ನಡುವೆ ಮಾಸೂರಿನ ಹೆಸರಾದ ಕೆರೆಯುಂಟು. ದಕ್ಷಿಣದ ಸಾಲು ಧಾರವಾಡ ಜಿಲ್ಲೆಗೂ ಮೈಸೂರು ಶೀಮೆಗೂ ಮೇರೆಯಾಗಿರುತ್ತದೆ. ಈ ಸಾಲುಗಳಲ್ಲದೆ ಜಿಲ್ಲೆಯ ಉತ್ತರ ಭಾಗದಲ್ಲಿ ಬಿಡಿ ಗುಡ್ಡಗಳೆಷ್ಟೋ ಇರುತ್ತವೆ. ಅವುಗಳಲ್ಲಿ ನರಗುಂದ (೭೦೦ ಫೂ.), ನವಲಗುಂದ, ಚಿಕ್ಕನರಗುಂದ, ಮುಂತಾದವುಗಳು ತಕ್ಕ ಮಟ್ಟಿಗೆ ಪ್ರಸಿದ್ಧವುಂಟು. ಕರ್ಜಗಿಯ ಹತ್ತರ ತಿರುಮಲಪ್ಪನ ಗುಡ್ಡವೆಂಬ ಗುಡ್ಡದ ಮೇಲೆ ತಿರುಮಲ ದೇವರ ಗುಡಿಯುಂಟು.

ಬೆಳಗಾವೀ ಜಿಲ್ಲೆಯಲ್ಲಿ ಅಥಣಿ, ಸಂಪಗಾವಿ, ಇವೆರಡು ತಾಲೂಕುಗಳ ಹೊರ್ತು ಉಳಿದ ಕಡೆಯಲ್ಲಿ ಗುಡ್ಡಗಳು ದಟ್ಟಾಗಿ ಹಬ್ಬಿರುತ್ತವೆ. ಕೆಲವುಗಳ ಮೇಲೆ ಭದ್ರವಾದ ಕೋಟೆಗಳಿರುತ್ತವೆ; ಕೆಲವುಗಳನ್ನು ಕಿರಿ ಅಡವಿಯು ವ್ಯಾಪಿಸಿರುವದು. ಕೆಲವುಗಳ ಮೇಲೆ ಬುಡದಿಂದ ತುದಿ ತನಕ ನಾನಾ ಪ್ರಕಾರದ ಪೈರುಗಳು ಶೋಭಿಸುವವು. ಇವುಗಳಲ್ಲಿ ಯೆರಡು ಸಾಲುಗಳು ಮುಖ್ಯ. ಅವೆರಡೂ ಪಶ್ಚಿಮದಿಂದ ಪೂರ್ವಕ್ಕೆ ಹಬ್ಬಿರುತ್ತವೆ. ದಕ್ಷಿಣದ ಸಾಲು ಬೆಳಗಾವಿಯ ಪಶ್ಚಿಮದಲ್ಲಿ ೬ಳ ಮೈಲಿನ ಮೇಲೆ ಆರಂಭವಾಗಿ ಘಟಪ್ರಭಾ, ಮಲಾಪಹಾರಿ, ಇವೆರಡುಗಳ ಮಧ್ಯದಲ್ಲಿ ಪೂರ್ವ ಸೀಮೆಯನ್ನು ದಾಟಿ ವಿಜಾಪುರ ಜಿಲ್ಲೆಯಲ್ಲಿ ಹೋಗಿರುತ್ತದೆ. ಇದರಲ್ಲಿ ಪಾರಗಡದ ಗುಡ್ಡ, ಕಾಳಾನಂದಿಗಡದ ಗುಡ್ಡ, ಯೆಂಬೆರಡು ಪ್ರಸಿದ್ಧ. ಇವು ಬೆಳಗಾವಿಯ ಪಶ್ಚಿಮದಲ್ಲಿ ಸುಮಾರು ೯೦೦ ಫೂಟು ಯೆತ್ತರವಾಗಿರುತ್ತವೆ. ಇವೆರಡುಗಳ ಮೇಲೆಯೂ ಪುರಾತನದ ಹಾಳು ಕೋಟೆಗಳಿರುತ್ತವೆ. ಚಂದಗಡದ ಪಶ್ಚಿಮದಲ್ಲಿ ಕೆಲವು ಯೆತ್ತರವಾದ ಗುಡ್ಡಗಳ ಮೇಲೆ ತೊಲೆಗಳಾಗುವಂಥ ದೊಡ್ಡ ಮರಗಳ ಅಡವಿಯು ಬೆಳೆದಿರುತ್ತದೆ. ಚಂದಗಡದ ಹತ್ತರ ಗಂಧರ್ವಗಡವೆಂಬ ಗುಡ್ಡವು ತಕ್ಕ ಮಟ್ಟಿಗೆ ಯೆತ್ತರವಾಗಿರುತ್ತದೆ. ಅದರ ಮೇಲಿನ ಕೋಟೆಯು ಹಾಳಾಗಿದೆ. ಮುಂದೆ ಪೂರ್ವಕ್ಕೆ ಹೋದ ಹಾಗೆ ಈ ಗುಡ್ಡಗಳ ಸಾಲು ಬಹಳ ಕಿರಿದಾಗುತ್ತ ಹೋದದ್ದರಿಂದ ಮಾರ್ಕಂಡೇಯಿ ಮುಂತಾದ ಪ್ರವಾಹಗಳು ಇದನ್ನು ದಾಟಿ ಉತ್ತರಕ್ಕೆ ಹೋಗುತ್ತವೆ. ಎರಡನೇ ಸಾಲು ಸಾವಂತವಾಡಿಯ ರಾಜ್ಯದಲ್ಲಿ ಆರಂಭವಾಗಿ ಘಟಪ್ರಭಾ, ಕೃಷ್ಣಾ, ಇವುಗಳ ನಡುವೆ ಪೂರ್ವಕ್ಕೆ ಸಾಗಿ ವಿಜಾಪುರ ಜಿಲ್ಲೆಯನ್ನು ಶೇರುತ್ತದೆ. ಈ ಸಾಲಿನ ಗುಡ್ಡಗಳ ಮೇಲೆ ಕಟ್ಟಿದ ಮನೋಹರಗಡ, ವಲ್ಲಭಗಡ ಮುಂತಾದ ಕೋಟೆಗಳು ಪೂರ್ವ ಕಾಲದಲ್ಲಿ ಹೆಸರಾಗಿದ್ದವು. ಚಿಕ್ಕೋಡಿಯ ಸೆರೆಯಲ್ಲಿ ನಾಗರಾಳ ಗುಡ್ಡ, ಮಲ್ಲಯ್ಯನ ಗುಡ್ಡ, ಜೋಗೀ ಗುಡ್ಡ, ನಿರ್ವಾಣೆಪ್ಪನ ಗುಡ್ಡ ಮುಂತಾದ ಗುಡ್ಡಗಳು ತಕ್ಕ ಮಟ್ಟಿಗೆ ಪ್ರಸಿದ್ಧವುಂಟು. ಇವುಗಳಲ್ಲಿ ಎಲ್ಲಕ್ಕೂ ಎತ್ತರವಾದ ನಾಗರಾಳ ಗುಡ್ಡವು ೮೭೫ ಫೂಟು ಯೆತ್ತರವಿರುತ್ತದೆ. ಇವುಗಳಲ್ಲಿ ಕೆಲವುಗಳ ಮೇಲೆ ಹುಲ್ಲು ಬೆಳೆದಿರುತ್ತವೆ; ಕೆಲವುಗಳ ಮೇಲೆ ಗೋದಿ, ಜೋಳ ಮುಂತಾದ ಧಾನ್ಯಗಳು ಬೆಳೆಯುವವು. ಈ ಸಾಲಿನ ಗುಡ್ಡಗಳಾದರೂ ಪೂರ್ವಕ್ಕೆ ಹೋದ ಹಾಗೆ ಕಿರಿದಾಗುತ್ತವೆ. ಇವಲ್ಲದೆ ಮಹೀಪಾಳಗಡದ ಸಾಲು, ಬೈಲೂರ ಗುಡ್ಡದ ಸಾಲು, ಜಾಂಬೋಟೀ ಗುಡ್ಡದ ಸಾಲು, ಯೆಂಬ ಮೂರು ಕಿರಿ ಸಾಲುಗಳಿರುತ್ತವೆ. ಇವುಗಳಲ್ಲಿ ಮೊದಲಿನ ಯೆರಡು ಗುಡ್ಡಗಳು ೩೦೦೦ ಫೂಟುಗಳಿಗಿಂತ ಎತ್ತರವಿರುತ್ತವೆ. ಬೈಲೂರ ಗುಡ್ಡದ ಸಾಲಿನಲ್ಲಿ ಯೆಳ್ಳೂರಗಡದ ಗುಡ್ಡವು ೩೩೭೫ ಫೂಟು ಯೆತ್ತರವಿರುತ್ತದೆ. ಈ ಜಿಲ್ಲೆಯಲ್ಲಿ ಬಿಡಿ ಗುಡ್ಡಗಳು ಯೆಲ್ಲ ಕಡೆಯಲ್ಲಿ ಇರುತ್ತವೆ. ಅವುಗಳಲ್ಲಿ ಬೆಳವಣಿಕೀ ಗುಡ್ಡ (೧೦೦೦ ಫೂ.) ಅಥಣೀ ತಾಲೂಕಿನಲ್ಲಿ ಬಸ್ತೀ ಗುಡ್ಡ (೬೬೭೩ ಫೂ.), ಮನ್ನೀಕೇರೀ ಗುಡ್ಡ (೬೪೫೪ ಫೂ.) ಗೋಕಾವೀ ತಾಲೂಕಿನಲ್ಲಿ, ಕಠಾರೀ ಗುಡ್ಡ (೬೪೪೪ ಫೂ.), ಯೆಲ್ಲಮ್ಮನ ಗುಡ್ಡ (೩೦೦೦ ಫೂ.), ಪರಸಗಡದ ಗುಡ್ಡ (೬೫೭೦ ಫೂ.), ಪರಗಡ ತಾಲೂಕಿನಲ್ಲಿ ಮತ್ತೂ ಕೆಲವು ಪ್ರಸಿದ್ಧ ಉಂಟು.

ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕೃಷ್ಣೆಯ ದಕ್ಷಿಣಕ್ಕೆ ವಿಶೇಷವಾಗಿ ಬಾಗಲಕೋಟೆ, ಬಾದಾವೀ ತಾಲೂಕುಗಳಲ್ಲಿ ಹಲಕೆಲವು ಗುಡ್ಡಗಳಿರುತ್ತವೆ. ಬೆಳಗಾವೀ ಜಿಲ್ಲೆಯಲ್ಲಿ ಮಲಾಪಹಾರಿಯ ಉತ್ತರದಲ್ಲಿಯೂ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಯೆರಡು ಸಾಲುಗಳು ಆ ಜಿಲ್ಲೆಯ ಪೂರ್ವ ಮೇರೆಯನ್ನು ದಾಟಿದ ಬಳಿಕ ಮೊದಲನೇದು ಬಾದಾವೀ ತಾಲೂಕನ್ನೂ ಎರಡನೇದು ಬಾಗಲಕೋಟೆಯ ತಾಲೂಕನ್ನೂ ಪ್ರವೇಶಿಸುತ್ತವೆ. ಬಾದಾವೀ ತಾಲೂಕಿನೊಳಗಿನ ಸಾಲು ಬಾದಾವಿ, ಮುದಕವ್ವಿ, ಗಜೇಂದ್ರಗಡ ಇವುಗಳ ಬಳಿಯಲ್ಲಿ ಹಾದು ಮಲಾಪಹಾರಿಯನ್ನು ದಾಟಿ ಹೋಗಿ ಅಮೀನಗಡದ ಹತ್ತರ ಘಟಪ್ರಭೆಯ ಉತ್ತರದ ಸಾಲಿಗೆ ಕೂಡುತ್ತದೆ. ಆ ಘಟಪ್ರಭೆಯ ಉತ್ತರದ ಸಾಲು ಬಾಗಲಕೋಟೆಯ ತಾಲೂಕಿನೊಳಗೆ ತಪ್ಪಲ ಭೂಮಿಯ ರೂಪದಿಂದ ಪ್ರವೇಶಿಸಿದ ಬಳಿಕ ಯೆರಡು ಟಿಸಿಲಾಗುತ್ತದೆ. ಅವುಗಳಲ್ಲಿ ವೊಂದು ಬೀಳಿಗಿಯ ಬಳಿಯಲ್ಲಿ ಹಾದು ಪೂರ್ವದ ಬೈಲಿನೊಳಗೆ ಹೋಗಿ ತಪ್ಪಲ ಭೂಮಿಯ ರೂಪವನ್ನು ಹೊಂದುತ್ತದೆ. ಎರಡನೇದು ಕುಂದರಿಗೆಯ ಬಳಿಯಲ್ಲಿಂದ ಘಟಪ್ರಭೆಯ ಉತ್ತರ ತೀರಗುಂಟ ಪೂರ್ವಕ್ಕೆ ಸಾಗಿ, ಹೆರಕಲ್ಲಿನ ಹತ್ತರ ಘಟಪ್ರಭೆಯನ್ನು ದಾಟಿ ಇಪ್ಪತ್ತು ಮೈಲಿನ ಮೇಲೆ ನಿಜಾಮನ ರಾಜ್ಯದಲ್ಲಿ ಅಮೀನಗಡದ ಹತ್ತರ ಮಲಾಪಹಾರಿಯ ಉತ್ತರದಿಂದ ಬರುವ ಸಾಲಿಗೆ ಕೂಡುತ್ತದೆ. ಕೃಷ್ಣೆಯ ಉತ್ತರದ ಬೈಲಿನಲ್ಲಿ ಬಹುತರ ಗುಡ್ಡಗಳೇ ಇಲ್ಲ; ತೆರೆಗಳಂತೆ ತಗ್ಗು ದಿನ್ನೆಯಾದ ಭೂಮಿಯೇ ವಿಶೇಷ. ಈ ಪ್ರದೇಶದೊಳಗಿನ ದಿನ್ನೆಗಳು ಒಮ್ಮೊಮ್ಮೆ ಸುಮಾರು ೧೦೦ ಫೂಟು ಎತ್ತರವಾದ ಗುಡ್ಡಗಳಂತೆ ಕಾಣುತ್ತವೆ.

## ನದಿಗಳು.

ಕೊಂಕಣ ಶೀಮೆಯ ಹೊಳೆಗಳಂತೆ ಕಾನಡಾ ಜಿಲ್ಲೆಯ ಹೊಳೆಗಳು ಘಟ್ಟದ ಕೆಳಗೆ ಮಾತ್ರ ಹರಿಯದೆ, ಮೇಲೆಯೂ ಹರಿಯುತ್ತವೆ. ಈ ಜಿಲ್ಲೆಯ ನದಿಗಳು, ಕಾಳೀ, ಬೆಡತಿ ಅಥವಾ ಗಂಗಾವಳಿ, ಡೋಣೀ ಹಳ್ಳ ಅಥವಾ ತದಡಿ, ಬಾಳ ನದಿ, ಯೆಂಬ ನಾಲ್ಕು ಮುಖ್ಯ. ಇವು ಘಟ್ಟದ ಮೇಲಿಂದ ಪಶ್ಚಿಮಕ್ಕೆ ಹರಿದು ಕೆಳಗೆ ಹೋದ ಕೂಡಲೆ ಇವುಗಳ ಹೆಸರುಗಳು ಬದಲಾಗುತ್ತವೆ. ಕಾಳೀ ನದಿಗೆ ಘಟ್ಟದ ಕೆಳಗೆ ಸದಾಶಿವಗಡದ ನದಿಯೆಂಬುವರು; ಬೆಡತೀ ಹಳ್ಳಕ್ಕೆ ಗಂಗಾವಳಿಯನ್ನುವರು; ಡೋಣೀ ಹಳ್ಳಕ್ಕೆ ತಗಡೀ ಹೊಳೆಯನ್ನುವರು; ಬಾಳ ನದಿಗೆ ಶರಾವತಿ ಅಥವಾ ಗೆರಸಪ್ಪೆಯ ನದಿಯನ್ನುವರು.

ಕಾಳೀನದಿ.—ಗೋವೆಯ ಶೀಮೆಯಿಂದ ಯೆರಡು ಪ್ರವಾಹಗಳು ಆಗ್ನೇಯಕ್ಕೆ ಹರಿದು ಸುಪೆಯ ಹತ್ತರ ವೊಂದಕ್ಕೊಂದು ಕೂಡುತ್ತವೆ. ಆ ಕೂಡುವ ಸ್ಥಳದಲ್ಲಿ ವೊಂದು ಪ್ರವಾಹದ ದಂಡೆಗಳು ಯೆತ್ತರವಾಗಿರುವ ಕಾರಣ ಅದರ ಪ್ರವಾಹವು ಕಪ್ಪಾಗಿ ಕಾಣುವದರಿಂದ ಅದಕ್ಕೆ ಕಾಳೀಯೆಂದೆನ್ನುವರು; ಮತ್ತೊಂದರ ದಂಡೆಗಳು ಇಳಕಲಾಗಿರುವ ಕಾರಣ ಅದರ ಪ್ರವಾಹವು ಬೆಳ್ಳಗಾಗಿ ಕಾಣುವದರಿಂದ ಅದಕ್ಕೆ ಪಾಂಢರಿಯೆಂದೆನ್ನುವರು. ಆದರೆ ಸಂಗಮವಾದ ಬಳಿಕ ಕಾಳೀ ಯೆಂಬ ಹೆಸರೇ ಕಡೆತನಕ ನದಿ

ಯುತ್ತದೆ. ಘಟ್ಟದ ಕೆಳಗೆ ಕದ್ರಾ ಎಂಬ ಗ್ರಾಮದ ವರೆಗೆ ಸಮುದ್ರದ ತೆರೆಗಳು ಈ ಹೊಳೆಯೊಳಗೆ ಬರುತ್ತವೆ. ಅಲ್ಲಿಯ ವರೆಗೆ, ಅಂದರೆ ಸಮುದ್ರ ದಂಡೆಯಿಂದ ೨೦ ಮೈಲು, ಸಮುದ್ರದೊಳಗಿನ ಡೋಣಿಗಳು ಈ ಹೊಳೆಯೊಳಗೆ ಬರುತ್ತವೆ. ಇದರ ಉದ್ದಳತೆ ಉಗಮದಿಂದ ಮುಖದ ವರೆಗೆ ಸುಮಾರು ೧೩೦ ಮೈಲು.

ಗಂಗಾವಳಿ.—ಧಾರವಾಡದ ದಕ್ಷಿಣದಲ್ಲಿ ಸೋಮೇಶ್ವರವೆಂಬ ದೇವಸ್ಥಾನದ ಬಳಿಯಲ್ಲಿ ಶಾಲ್ಮಲಾ ಎಂಬ ಹೆಸರಿನದೊಂದು, ಮುಗದದ ಕೆರೆಯಲ್ಲಿ ಬೆಡತೀ ಹಳ್ಳವೆಂಬ ಹೆಸರಿನದು ಮತ್ತೊಂದು, ಹೀಗೆ ಯೆರಡು ಪ್ರವಾಹಗಳು ಹುಟ್ಟಿ ಕಲಘಟಗಿಯ ಹತ್ತರ ವೊಟ್ಟುಗೂಡಿ ಬೆಡತೀ ಹಳ್ಳವೆಂಬ ಹೆಸರಿನಿಂದ ೧೫ ಮೈಲು ದಕ್ಷಿಣಕ್ಕೆ ಹರಿದ ಬಳಿಕ ಇದು ಪಶ್ಚಿಮಕ್ಕೆ ವೊಲಿದು ಕಾನಡಾ ಜಿಲ್ಲೆಯನ್ನು ಸೇರುತ್ತದೆ. ಅಲ್ಲಿಂದ ಮುಂದೆ ಬಹುಶಃ ಸರಳವಾಗಿ ನೈರುತ್ಯಕ್ಕೆ ೬೦ ಮೈಲು ಹರಿದು ಹೋಗಿ ಗೋಕರ್ಣದ ಉತ್ತರದಲ್ಲಿ ಇದು ಸಮುದ್ರಕ್ಕೆ ಕೂಡುತ್ತದೆ. ಘಟ್ಟದ ಕೆಳಗೆ ಮಾಗೋಡದ ಹತ್ತರ ಇದರ ಪ್ರವಾಹದಿಂದ ವೊಂದು ಮನೋಹರವಾದ ತಡಲು ಉಂಟಾಗಿದೆ. ಗುಂಡಬಾಳೆಯ ವರೆಗೆ, ಸಮುದ್ರದಿಂದ ೧೫ ಮೈಲು ಸಮುದ್ರದೊಳಗಿನ ಡೋಣಿಗಳು ಈ ಹೊಳೆಯೊಳಗೆ ಬರುತ್ತವೆ.

ಅಘನಾಶಿನಿ ಅಥವಾ ತದಡೀ ಹೊಳೆ.—ಶಿರಶಿಯ ಪಶ್ಚಿಮದಲ್ಲಿ ೧೫ ಮೈಲಿನ ಮೇಲೆ ಮಂಜಗುಂಜಿ ಯೆಂಬಲ್ಲಿ ವೊಂದು ಹೊಂಡದಿಂದ ಬಾಕೂರ ಹೊಳೆಯೆಂಬ ಪ್ರವಾಹವು ಹರಿಯುತ್ತದೆ; ಶಿರಶಿಯ ಹತ್ತರದಿಂದ ಡೋಣೀ ಹಳ್ಳವೆಂಬ ಪ್ರವಾಹವು ಹರಿದು ಹೋಗಿ ಮಟ್ಟಹಳ್ಳಿಯ ಹತ್ತರ ಬಾಕೂರ ಹೊಳೆಗೆ ಕೂಡುತ್ತದೆ. ಮುಂದೆ ಇದು ಡೋಣೀ ಹಳ್ಳವೆಂಬ ಹೆಸರಿನಿಂದಲೇ ೧೫ ಮೈಲು ಪಶ್ಚಿಮಕ್ಕೆ ಹರಿದು ಘಟ್ಟದ ಮೇಲಿಂದ ಕೆಳಗೆ ಬೀಳುತ್ತದೆ. ಈ ಬಹು ಭವ್ಯವಾದ ತಡಸಲಿಗೆ ಇಂಗ್ಲಿಷದಲ್ಲಿ "ಲಶಿಂಗಂಟನ್ ಫಾಲ್ಸ" ಎಂಬ ಹೆಸರು ಬಂದದೆ. ಇಲ್ಲಿಂದ ಮುಂದೆ ೧೦ ಮೈಲಿನ ಮೇಲೆ ಉಪ್ಪಿನ ಪಟ್ಟಣದ ವರೆಗೆ ಇದರ ಪ್ರವಾಹದಲ್ಲಿ ತೆರೆಗಳು ಸಮುದ್ರದಿಂದ ೧೫ ಮೈಲು ಸಾಗಿ ಬರುತ್ತವೆ; ಉಪ್ಪಿನ ಪಟ್ಟಣದ ವರೆಗೆ ದೊಡ್ಡ ಡೋಣಿಗಳು ನಡಿಯುತ್ತವೆ. ಮುಖದ ಹತ್ತರ ಪ್ರವಾಹದಿಂದ ೮ ಮೈಲು ಉದ್ದವಾದದ್ದೊಂದು ಸರೋವರದಂಥ ಸಂಚಯವಾಗಿದೆ. ಅದಕ್ಕೂ ಸಮುದ್ರಕ್ಕೂ ನಡುವೆ ೧ ಮೈಲು ಅಗಲಾದ ಭೂಮಿಯುಂಟು. ಸರೋವರದಿಂದ ಸಮುದ್ರಕ್ಕೆ ಕೂಡುವ ಮುಖವು ಆ ಭೂಮಿಯ ಮಧ್ಯದ ಸುಮಾರಿನಲ್ಲಿ ಇರುತ್ತದೆ. ಈ ಹೊಳೆಯ ಉದ್ದಳತೆ ೪೫ ಮೈಲು. ಇದರ ದಂಡೆಯಲ್ಲಿ ಘಟ್ಟದ ಕೆಳಗೆ ಮಿರ್ಜಾನ, ತದಡಿ, ಯೆಂಬ ಮುಖ್ಯ ಗ್ರಾಮಗಳಿವೆ.

ಶರಾವತಿ.—ಇದಕ್ಕೆ ಬಾರಾಗಂಗಾ, ಗೆರಸಪ್ಪೆಯ ಹೊಳೆಯೆಂಬ ಹೆಸರುಗಳುಂಟು. ಇದು ಮೈಸೂರಿನ ಶೀಮೆಯಲ್ಲಿ ಬೆದನೂರಿನ ಹತ್ತರ ಉಗಮವಾಗಿ ಸುಮಾರು ೪೦ ಮೈಲು ಉತ್ತರಕ್ಕೆ ಹರಿದು, ಕಾನಡಾ ಜಿಲ್ಲೆಯ ಆಗ್ನೇಯ ಮೇರೆಯಾಗಿ ೮ ಮೈಲು ಹರಿದು, ಆ ಮೇಲೆ ೨೦ ಮೈಲು ಪಶ್ಚಿಮಕ್ಕೆ ಹರಿದು ಹೋಗಿ ಹೊನ್ನಾವರದ ಹತ್ತರ

ಸಮುದ್ರಕ್ಕೆ ಕೂಡುತ್ತದೆ. ಈ ಜಿಲ್ಲೆಯೊಳಗೆ ಶೇರಿದ ಬಳಿಕ ಇದು ನಾಲ್ಕು ಯೆಸಳಾಗಿ ಸಹ್ಯಾದ್ರಿಯ ಮೇಲಿಂದ ೮೨೫ ಫೂಟಿನ ಕೆಳಗೆ ೩೫೦ ಫೂಟು ಆಳವಾದಪ್ಟೊಂದು ಮಡುವಿನಲ್ಲಿ ಅತಿ ಮನೋಹರವಾದ ತಡಸಲಾಗಿ ಬೀಳುತ್ತವೆ. ಇದೇ ಹೆಸರಾದ ಗೆರಸಪ್ಪೆಯ ತಡಸಲು. ಗೆರಸಪ್ಪೆಯು ಇಲ್ಲಿಂದ ಪಶ್ಚಿಮಕ್ಕೆ ೧೮ ಮೈಲು ದೂರ ಇರುತ್ತವೆ. ಶರಾವತಿಯು ಸಮುದ್ರಕ್ಕೆ ಕೂಡುವ ಪೂರ್ವದಲ್ಲಿ ಇದರ ಪ್ರವಾಹವು ಸುಮಾರು ೨ ಮೈಲು ಅಗಲಾಗಿದೆ; ಅಲ್ಲಿ ಹಲಕೆಲವು ನಡುಗಡ್ಡೆಗಳಾಗಿವೆ. ಮಾವಿನಕುರ್ವೆ ಎಂಬ ನಡುಗಡ್ಡೆಯು ಮೂರು ಮೈಲು ಉದ್ದವುಂಟು. ಅಲ್ಲಿಯ ಬತ್ತದ ಗದ್ದೆಗಳೂ ತೆಂಗು ಮಾವುಗಳ ಬನಗಳೂ ಬಹು ರಮಣೀಯವಾಗಿರುತ್ತವೆ. ಆದರೆ ಮುಖದಲ್ಲಿ ಈ ಹೊಳೆ ೩೦೦ ಯಾರ್ಡಿಗಿಂತ ಹೆಚ್ಚು ಅಗಲಿಲ್ಲ.

ಇವಲ್ಲದೆ ಸಣ್ಣ ಸಣ್ಣ ಪ್ರವಾಹಗಳು ಕಾನಡಾ ಜಿಲ್ಲೆಯಲ್ಲಿ ಬಹಳ ಇರುತ್ತವೆ. ಸಾಡಿಕೆಯಾಗಿ ೭೫ನೇ ರೇಖಾ ವೃತ್ತದ ಪಶ್ಚಿಮಕ್ಕೆ ಹುಟ್ಟುವ ಪ್ರವಾಹಗಳು ಪಶ್ಚಿಮಕ್ಕೆ ಹರಿದು ಸಮುದ್ರಕ್ಕೆ ಕೂಡುತ್ತವೆ; ಅದರ ಪೂರ್ವಕ್ಕೆ ಹುಟ್ಟುವ ಪ್ರವಾಹಗಳು ಪೂರ್ವಕ್ಕೆ ಹರಿದು ವರದಾ ನದಿಗೆ ಕೂಡುತ್ತವೆ. ಘಟ್ಟದ ಕೆಳಗೆ ಅಲ್ಲಲ್ಲಿಗೆ ಸಣ್ಣ ದೊಡ್ಡ ಪ್ರವಾಹಗಳು ಹರಿಯುವ ಕಾರಣ ಬಂಡಿಗಳು ನಡಿಯುವದಿಲ್ಲ. ಆದರೆ ಭರತಿಯ ಕಾಲಕ್ಕೆ ೨ರಿಂದ ೧೦ ಮೈಲುಗಳ ವರೆಗೆ ಈ ಪ್ರವಾಹಗಳಲ್ಲಿ ಡೋಣಿಗಳು ನಡಿಯುತ್ತವೆ.

ಕಾನಡಾ ಜಿಲ್ಲೆಯ ಸಮುದ್ರ ತೀರದಲ್ಲಿ ಬಹುತರ ತುಫಾನುಗಳಾಗುವದಿಲ್ಲ. ಆದರೂ ಸನ್ ೧೮೭೦ರಲ್ಲಿ ವೊಂದು, ೧೮೭೯ರಲ್ಲಿ ಮತ್ತೊಂದು, ಹೀಗೆ ಯೆರಡು ತುಫಾನುಗಳು ವೊಳಗಡೆಯಲ್ಲಿ ಆದದ್ದುಂಟು. ಎರಡನೇದಲ್ಲಿ ಕಾರವಾಡದ ಬಂದರದಲ್ಲಿ ನಿಲ್ಲಿಸಿದ್ದ ಹಡಗಗಳಿಗೆ ರಾತ್ರಿಯಲ್ಲಿ ಬಹಳ ಕೇಡಾಯಿತು; ಒಂದೆರಡು ಹಡಗಗಳಂತು ವೊಡಿದು ಹೋದವು.

ಧಾರವಾಡ ಜಿಲ್ಲೆಯಲ್ಲಿ ಕೆಲವು ಪ್ರವಾಹಗಳು ಆಗ್ನೇಯಕ್ಕೂ ನೈರುತ್ಯಕ್ಕೂ ಹರಿದು ತುಂಗಭದ್ರೆಗೆ ಕೂಡುತ್ತವೆ; ಬೇರೆ ಕೆಲವು ಉತ್ತರಕ್ಕೂ ಈಶಾನ್ಯಕ್ಕೂ ಹರಿದು ಮಲಾಪಹಾರಿಗೆ ಕೂಡುತ್ತವೆ.

ತುಂಗಭದ್ರೆಯು.—ಮೈಸೂರ ಶೀಮೆಯ ಈಶಾನ್ಯ ಮೇರೆಯಲ್ಲಿ ತುಂಗಾ, ಭದ್ರಾ, ಎಂಬೆರಡು ಹೊಳೆಗಳು ಸಹ್ಯಾದ್ರಿಯಲ್ಲಿ ಉಗಮವಾಗಿ ಸುಮಾರು ೫೦ ಮೈಲು ಉತ್ತರಕ್ಕೆ ಹರಿದು ಕೂಡಲಿಗಿಯ ಹತ್ತರ ಯೆರಡೂ ಕೂಡಿ ತುಂಗಭದ್ರೆ ಯೆಂಬ ಹೆಸರು ಹೊಂದುತ್ತವೆ. ಮುಂದೆ ೩೫ ಮೈಲು ಉತ್ತರಕ್ಕೆ ಹರಿದ ಬಳಿಕ ಹರಿಹರದ ಹತ್ತರ ತುಂಗಭದ್ರೆಯು ಧಾರವಾಡ ಜಿಲ್ಲೆಯ ಪೂರ್ವ ಮೇರೆಯಾಗಿ ೮೦ ಮೈಲು ಉತ್ತರಕ್ಕೆ ಹರಿದ ನಂತರ ಡಂಬಳದ ಹತ್ತರ ನಿಜಾಮನ ರಾಜ್ಯವನ್ನು ಶೇರುತ್ತದೆ. ಇದು ನಿಜಾಮನ ರಾಜ್ಯದಲ್ಲಿ ಅಲಂಪುರದ ಹತ್ತರ ಕೃಷ್ಣೆಗೆ ಕೂಡುತ್ತದೆ. ಉಗಮದಿಂದ ಅಲ್ಲಿಯ ವರೆಗೆ ಇದರ ಉದ್ದಳತೆ ಸುಮಾರು ೪೦೦ ಮೈಲು. ಧಾರವಾಡ ಜಿಲ್ಲೆಯ ದಕ್ಷಿಣ ಭಾಗದ ಪ್ರವಾಹಗಳೆಲ್ಲ ಇದಕ್ಕೆ ಕೂಡುತ್ತವೆ. ಹರಿಹರದ ಹತ್ತರ ಈ ಹೊಳೆಗೆ ದೊಡ್ಡ ಪೂಲು

ಕಟ್ಟಿದ್ದಾರೆ. ಗದಗ ತಾಲೂಕಿನಲ್ಲಿ ಕೊರ್ಲಹಳ್ಳಿಯ ಹತ್ತರ ತುಂಗಭದ್ರೆಗೆ ಪೂರ್ವ ಕಾಲದಲ್ಲಿ ದೊಡ್ಡದೊಂದು ವೊಡ್ಡು ಕಟ್ಟಿದ್ದರ ಕುರುಹುಗಳು ಈಗ್ಯೂ ಕಾಣುತ್ತವೆ. ತುಂಗಭದ್ರೆಯ ನೀರು ಬಹು ಸವಿಯಾದಾಗ್ಯೂ ರೋಗಕಾರಕವೆಂದು ಹೇಳುತ್ತಾರೆ.

ವರದಾ.— ಇದು ಮೈಸೂರ ಶೀಮೆಯಲ್ಲಿ ಇಕ್ಕೇರಿಯ ಹತ್ತರ ಉಗಮವಾಗಿ, ಸುಮಾರು ೪೦ ಮೈಲು ಉತ್ತರಕ್ಕೆ ಹರಿದು, ಗೊಂಡಿ ಯೆಂಬ ಗ್ರಾಮದ ಹತ್ತರ ಧಾರವಾಡ ಜಿಲ್ಲೆಯನ್ನು ಶೇರಿ, ಹಾನಗಲ್ಲು, ಕರ್ಜಗಿ ತಾಲೂಕುಗಳಲ್ಲಿ ಪೂರ್ವಕ್ಕೆ ಸುಮಾರು ೫೦ ಮೈಲು ಹರಿದು ಕರ್ಜಗೀ ತಾಲೂಕಿನ ಈಶಾನ್ಯ ಮೂಲೆಯಲ್ಲಿ ತುಂಗಭದ್ರೆಗೆ ಕೂಡುತ್ತದೆ. ಈ ಹೊಳೆಯಿಂದ ಭೂಮಿಗೆ ಬಹಳ ಉಪಯೋಗವಿಲ್ಲದಿದ್ದಾಗ್ಯೂ ಕುಡಿಯುವ ನೀರು ಜನರಿಗೆ ಸಮೃದ್ಧಿಯಾಗಿ ದೊರೆಯುತ್ತದೆ. ಬೇಸಿಗೆಯಲ್ಲಿ ಇದು ಬಹು ತರ ಹರಿಗಡಿಯುವದಿಲ್ಲ. ಬಂಕಾಪುರದ ಹತ್ತರಕ್ಕೆ ಕುಣೀಮೆಳ್ಳೀಹಳ್ಳಿ ಯೆಂಬಲ್ಲಿ ಈ ಹೊಳೆಗೆ ವೊಂದು ಪೂಲು ಕಟ್ಟಿದ್ದಾರೆ.

ಧರ್ಮಾ.— ಇದು ಹಾನಗಲ್ಲಿನ ನೈರುತ್ಯದಲ್ಲಿ ೨೦ ಮೈಲಿನ ಮೇಲೆ ಉಗಮವಾಗಿ, ಆ ತಾಲೂಕಿನಲ್ಲಿ ೩೫ ಮೈಲು ಈಶಾನ್ಯಕ್ಕೆ ಹರಿದು ಬಂಕಾಪುರದ ದಕ್ಷಿಣದಲ್ಲಿ ವರದೆಗೆ ಕೂಡುತ್ತದೆ. ಇದರ ಪ್ರವಾಹವು ಬಹಳ ಸಣ್ಣದಿರುತ್ತದೆ. ಆದರೆ ಹಾನಗಲ್ಲಿನ ಪಶ್ಚಿಮದಲ್ಲಿ ಶೃಂಗೇರಿ ಯೆಂಬ ಗ್ರಾಮದ ಹತ್ತರ ಪೂರ್ವ ಕಾಲದವರು ಇದಕ್ಕೊಂದು ಒಡ್ಡು ಕಟ್ಟಿದ್ದಾರೆ. ಅಲ್ಲಿಂದ ಒಂದು ಕಾವಲಿ ಹೊರಟು, ೧೨ ಮೈಲು ಹರಿದು ೭೦ಕ್ಕಿಂತ ಹೆಚ್ಚು ಕೆರೆಗಳಿಗೆ ನೀರು ಪೂರೈಸುವದಲ್ಲದೆ ಯೆಡಬಲಗಳಲ್ಲಿ ಅಸಂಖ್ಯ ಬತ್ತದ ಗದ್ದೆಗಳನ್ನೂ ಕಬ್ಬಿನ ತೋಟಗಳನ್ನೂ ಉಂಟುಮಾಡಿರುತ್ತವೆ.

ಕುಮುದ್ವತಿ.— ಇದು ಮೈಸೂರ ಶೀಮೆಯಲ್ಲಿ ಸುಮಾರು ೪೦ ಮೈಲು ಉತ್ತರಕ್ಕೆ ಹರಿದು ಧಾರವಾಡ ಜಿಲ್ಲೆಯ ದಕ್ಷಿಣ ಮೇರೆಯನ್ನು ದಾಟ ಬಂದು ಕೋಡ ತಾಲೂಕಿನೊಳಗೆ ಸುಮಾರು ೨೫ ಮೈಲು ಈಶಾನ್ಯಕ್ಕೆ ಹರಿಯುತ್ತದೆ. ಇದು ಧಾರವಾಡ ಜಿಲ್ಲೆಯ ಮೇರೆಯನ್ನು ದಾಟುವ ಸ್ಥಳದಲ್ಲಿ ಪೂರ್ವದ ವಿಜಯ ನಗರದ ಅರಸರು ಇದಕ್ಕೆ ಒಂದು ವೊಡ್ಡು ಕಟ್ಟಿ, ಇದರ ಪ್ರವಾಹವನ್ನು ಮದಗದ ಕೆರೆಯೊಳಗೆ ತಿರಿವಿದ್ದಾರೆ. ಇವಲ್ಲದೆ ಕುಮುದ್ವತಿಯ ಯೆಡಕ್ಕೂ ಬಲಕ್ಕೂ ಬೇರೆ ಎರಡು ಒಡ್ಡುಗಳನ್ನು ಹಾಕಿ, ಕೆರೆಯ ನೀರು ಹೊರಗೆ ಹೋಗದಂತೆ ಭದ್ರಪಡಿಸಿದ್ದಾರೆ. ಆದರೆ ಮುಂದೆ ಸ್ವಲ್ಪ ಕಾಲದೊಳಗೆ ಹೊಳೆಯ ಪ್ರವಾಹದಿಂದ ವೊಂದು ಒಡ್ಡು ವೊಡೆದು ಅದರೊಳಗಿಂದ ಪ್ರವಾಹವು ಹರಿಯ ಹತ್ತಿದ್ದು ಇನ್ನೂ ಹಾಗೇ ಹರಿಯುತ್ತದೆ. ಒಳಗಡೆಯಲ್ಲಿ ಇಂಗ್ಲಿಷ ಸರಕಾರದವರು ಕೆರೆಗೆ ಹೊಂದಿರುವ ವೊಡ್ಡನ್ನು ಕೆಲವು ಮಟ್ಟಿಗೆ ದುರಸ್ತು ಮಾಡಿ, ಕೆರೆಯೊಳಗಿಂದ ಯೆರಡು ಕಾವಲಿಗಳನ್ನು ತೆಗೆದಿದ್ದಾರೆ. ಈ ಕಾವಲಿಗಳಿಂದ ೪೪ ಎಕರು ಭೂಮಿಗೆ ನೀರು ದೊರೆಯುತ್ತದೆ. ಮದಗದ ಕೆರೆಯು ವೊಂದು ಮೈಲು ಉದ್ದ ಇರುತ್ತದೆ.

ಹಿರೆಹಳ್ಳ.— ಇದು ಲಕ್ಕುಂಡಿಯ ಹತ್ತರ ಕಪೋತ ಗುಡ್ಡದಲ್ಲಿ ಉಗಮವಾಗಿ ದಕ್ಷಿಣಕ್ಕೆ ೨೦ ಮೈಲು ಹರಿದು ತುಂಗಭದ್ರೆಗೆ ಕೂಡುತ್ತದೆ. ಬೇಸಿಗೆಯಲ್ಲಿ ಇದು

ಹರಿಗಡಿಯುವದು; ಆದರೆ ಮಳೆಗಾಲದಲ್ಲಿ ಇದರ ಪ್ರವಾಹವು ೫೦೦ ಫೂಟು ಅಗಲಾಗುತ್ತದೆ.

ಬೆಣ್ಣೇ ಹಳ್ಳ.— ಇದು ಬಂಕಾಪುರ ತಾಲೂಕಿನಲ್ಲಿ ಧುಂಡಶಿಯ ಹತ್ತಿರ ಆರಂಭವಾಗಿ ಉತ್ತರಕ್ಕೆ ಹುಬ್ಬಳ್ಳಿ, ನವಲಗುಂದ, ರೋಣ ತಾಲೂಕುಗಳಲ್ಲಿ ಹರಿದು ಮಲಾಪಹಾರಿಗೆ ಕೂಡುತ್ತದೆ. ಇದರ ಪಾತ್ರೆಯಲ್ಲೆಲ್ಲ ಕೆಸರೇ ಇರುವದು. ಮಳೆಗಾಲದಲ್ಲಿ ಪಾತ್ರೆಯು ೨೦೦ ಫೂಟನ ವರೆಗೆ ಅಗಲಾಗುವದು. ಆದರೆ ಬೇಸಿಗೆಯಲ್ಲಿ ಹರಿಗಡಿದು ಹಲಕೆಲವು ಮಡುವುಗಳಲ್ಲಿ ಮಾತ್ರ ನೀರು ನಿಲ್ಲುವದು. ಇದರ ಪಾತ್ರೆಯೊಳಗಿನ ಕೆಸರು ಬೆಣ್ಣೆಯ ಹಾಗೆ ಬಹು ಮಿದುವಾಗಿರುವ ಕಾರಣ ಇದಕ್ಕೆ ಬೆಣ್ಣೇ ಹಳ್ಳವೆಂಬ ಹೆಸರು ಬಂದದೆ. ಈ ಕೆಸರೊಳಗೆ ಅಂಬಾರಿ ಸಹಿತ ಆನೆಯು ಹಿಂದಕ್ಕೊಮ್ಮೆ ಮುಳುಗಿತೆಂದು ಹೇಳುತ್ತಾರೆ. ಮಳೆಗಾಲದಲ್ಲಿ ಹಳ್ಳವು ತುಂಬಿ ಇಳಿದ ಬಳಿಕ ಕೆಲವು ದಿವಸದ ಮೇಲೆ ಕೆಸರಿನ ಮೇಲ್ಭಾಗವು ಕೆನೆಗಟ್ಟಿ ಅದರ ಮೇಲೆ ಹುಲ್ಲು ಬೆಳೆಯುತ್ತದೆ. ಅದನ್ನು ನೋಡಿ ಮನುಷ್ಯರೂ ಪಶುಗಳೂ ಪಾತ್ರೆಯನ್ನು ದಾಟಲಿಕ್ಕೆ ಹೋದರೆ ಕೆಸರೊಳಗೆ ಮುಳುಗಿ ಗಪ್ಪಾಗುತ್ತವೆ. ಅವು ಮುಳುಗಿದ ಕುರುಹು ಸಹ ಉಳಿಯುವದಿಲ್ಲೆಂದು ಹೇಳುತ್ತಾರೆ. ಆದರಿಂದ ಗೊತ್ತಾದ ಮಾರ್ಗದಿಂದ ಮಾತ್ರ ಇದರ ಪಾತ್ರೆಯನ್ನು ಬಹು ಜಾಗ್ರತೆಯಿಂದ ದಾಟಬೇಕಾಗುತ್ತದೆ.

ಮಲಾಪಹಾರಿಯು.* — ಇದು ಬೆಳಗಾವಿಯ ಪಶ್ಚಿಮಕ್ಕೆ ಖಾನಾಪುರ ತಾಲೂಕಿನಲ್ಲಿ ಕುಳಕುಂಬಿಯ ಹತ್ತಿರ ಉಗಮವಾಗಿರುತ್ತದೆ. ಪೂರ್ವ ಕಾಲದಲ್ಲಿ ಕುಳಕುಂಬಿಯಲ್ಲಿ ವೊಬ್ಬ ಮನುಷ್ಯನ ಹೆಂಡತಿಯು ಬಹು ಸುಂದರಿಯಾಗಿಯೂ ಪತಿವ್ರತೆಯಾಗಿಯೂ ಇದ್ದಳಂತೆ. ಆಕೆಯು ಗಂಡನು ಆಕೆಯ ಮೇಲೆ ಜಾರಕರ್ಮದ ಆರೋಪವನ್ನು ಇಡಲಾಗಿ, ಆಕೆಯು ವೊಂದು ಮಡುವಿನಲ್ಲಿ ದುಮುಕಿ, ತತ್ಕಾಲವೇ ಹೊಳೆಯಾಗಿ ಹರಿಯ ಹತ್ತಿದಳೆಂದು ಧರ್ಮಮೂಢರಾದ ಭಾವಿಕ ಜನರು ಹೇಳುತ್ತಾರೆ. ಮುನ್ನೊಳ್ಳಿಯ ಹತ್ತರ ಮಲಾಪಹಾರಿಯು ಗುಡ್ಡವನ್ನು ವೊಡಿದು ಪೂರ್ವಕ್ಕೆ ಹರಿಯುತ್ತದೆ. ಅಲ್ಲಿ ನವಿಲತೀರ್ಥವೆಂಬುವದೊಂದು ಮಡುವು ಇರುತ್ತದೆ. ಅದರ ಕಥೆಯನ್ನು ಜನರು ಈ ಪ್ರಕಾರ ಹೇಳುತ್ತಾರೆ. ಬುನಾದಿಯಲ್ಲಿ ಮಲಾಪಹಾರಿಯು ಗುಡ್ಡದ ವಾರಿಗುಂಟ ಹರಿಯುತ್ತಿತ್ತು. ಒಂದಾನೊಂದು ದಿನ ಆ ಗುಡ್ಡದ ಮೇಲೆ ವೊಂದು ನವಿಲು ಕೂತು ಆ ಹೊಳೆಯನ್ನು ಧಿಕ್ಕರಿಸಿತಂತೆ. ಆ ಕ್ಷಣವೇ ನವಿಲು ನಟ್ಟನಡುವೆ ಇಬ್ಭಾಗವಾಗುವಂತೆ ಗುಡ್ಡವನ್ನು ವೊಡಿದು ಮಲಾಪಹಾರಿಯು ಹೊರಬಿತ್ತೆಂದು ಹೇಳುತ್ತಾರೆ. ಗುಡ್ಡವನ್ನು ವೊಡಿದ ಸ್ಥಳದಲ್ಲಿ ಹೊಳೆಯ ಯೆರಡೂ ದಂಡೆಗಳಲ್ಲಿ ಆ ನವಿಲಿನ ಯೆರಡು ತುಂಡುಗಳನ್ನು ಗುಡ್ಡದ ಮೇಲೆ ಈಗ್ಯೂ ತೋರಿಸುತ್ತಾರೆ. ವಸ್ತುತಃ ಪೂರ್ವಕಾಲದಲ್ಲಿ ಮುನ್ನೊಳ್ಳಿಯ ಗುಡ್ಡದ ಪಶ್ಚಿಮಕ್ಕೆ ಬಹು ವಿಶಾಲವಾದದ್ದೊಂದು ಕೆರೆ ಇತ್ತೆಂದು ತೋರುತ್ತದೆ. ಆ ಕೆರೆಯ ನೀರು ಹೊರ ಚಲ್ಲಿ ಗುಡ್ಡದ ಮೇಲಿಂದ ಹರಿಯುತ್ತಾ ಹರಿಯುತ್ತಾ ಗುಡ್ಡವನ್ನು

* ಇದರ ಬುನಾದಿಯ ಹೆಸರು "ಮಲೆಪೆಟಿ," ಅಂದರೆ ಗುಡ್ಡದ ಸಮುದ್ರ.

ಸವಿಸುತ್ತಾ ಬಂದು ಕಾಲಾಂತರದಿಂದ ಗುಡ್ಡವನ್ನು ವೊಡಿದು ಹೊಳೆಯ ರೂಪದಿಂದ ಹರಿಯ ಹತ್ತಿತೆಂಬು ವಿದ್ವಾಂಸರು ತರ್ಕಿಸುತ್ತಾರೆ. ಮಲಾಪಹಾರಿಯು ಖಾನಾಪುರ, ಸಂಪಗಾವಿ, ಪರಸಗಡ ತಾಲೂಕುಗಳಲ್ಲಿ ಪೂರ್ವಕ್ಕೆ ಹರಿದು, ತೊರಗಲ್ಲು, ರಾಮದುರ್ಗಗಳ ಬಳಿಯ ಲ್ಲಿಂದ ಪೂರ್ವಕ್ಕೆ ಸಾಗಿ ಕಪ್ಪಡೀ ಸಂಗಮದ ಹತ್ತರ ಕೃಷ್ಣೆಗೆ ಕೂಡುತ್ತವೆ. ಇದರ ಉದ್ದ ಳತೆ ಉಗಮದಿಂದ ಸಂಗಮದ ವರೆಗೆ ೧೬೦ ಮೈಲು. ಮುನ್ನೊಳ್ಳಿಯ ಪೂರ್ವಕ್ಕೆ ೧೦ ಮೈ ಲಿನ ಮೇಲೆ ಸೊಗಲದ ಬಳಿಯಲ್ಲಿ ಈ ಹೊಳೆಯು ಪ್ರವಾಹದಿಂದ ವೊಂದು ಬಹು ರಮಣೀ ಯವಾದ ತಡಸಲು ಉಂಟಾಗಿರುತ್ತದೆ. ಮಲಾಪಹಾರಿಯ ದಂಡೆಯಲ್ಲಿರುವ ಗ್ರಾಮಗಳ ನೆರೆಯಲ್ಲಿ ಹೊಳೆಯ ಪ್ರವಾಹದೊಳಗೆ ಈಶ್ವರನ ಗುಡಿಯು ಬಹುತರ ಯೆಲ್ಲ ಕಡೆಯಲ್ಲಿ ಇರುತ್ತದೆ. ಬೆಳಗಾವೀ ಜಿಲ್ಲೆಯ ದಕ್ಷಿಣ ಭಾಗದಲ್ಲಿಯೂ ಧಾರವಾಡ ಜಿಲ್ಲೆಯ ಉತ್ತರ ಭಾಗದಲ್ಲಿಯೂ ಹರಿಯುವ ಸಣ್ಣ ಸಣ್ಣ ಸರುವುಗಳೆಲ್ಲ ಮಲಾಪಹಾರಿಗೆ ಕೂಡುತ್ತವೆ.

ಘಟಪ್ರಭಾ.* — ಇದು ಕೊಲ್ಲಾಪುರದ ರಾಜ್ಯದೊಳಗೆ ಸುಂದರಗಡವೆಂಬಲ್ಲಿ ಉಗ ಮವಾಗಿ, ಈಶಾನ್ಯಕ್ಕೆ ಹರಿದು ಬೆಳಗಾವೀ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅಲ್ಲಿಂದ ಮುಂದೆ ಚಿಕ್ಕೋಡಿ, ಗೋಕಾವೀ ತಾಲೂಕುಗಳಲ್ಲಿ ಈಶಾನ್ಯಕ್ಕೂ ಪೂರ್ವಕ್ಕೂ ಹರಿದು ಬಾಗಲಕೋಟೆಯ ತಾಲೂಕಿನಲ್ಲಿ ಕೂಡಲ ಸಂಗಮದ ಹತ್ತರ ಕೃಷ್ಣೆಗೆ ಕೂಡುತ್ತದೆ. ಇದರ ಉದ್ದಳತೆ ಉಗಮದಿಂದ ಸಂಗಮದ ವರೆಗೆ ಸುಮಾರು ೧೦೦ ಮೈಲು. ಚಿಕ್ಕೋಡೀ ತಾಲೂಕಿನಲ್ಲಿ ಇದಕ್ಕೆ ತಾಮ್ರಪರ್ಣೆ, ಹರಣಕಾಶಿ (ಹಿರಣ್ಯಕೇಶಿ) ಯೆಂಬ ಸಣ್ಣ ಹೊಳೆಗಳು ಕೂಡುತ್ತವೆ; ಗೋಕಾವಿಯ ಹತ್ತರ ಮಾರ್ಕಂಡೇಯಿ ಎಂಬ ಹೊಳೆಯು ಸಂಗಮವಾ ಗುತ್ತದೆ. ಗೋಕಾವಿಯ ಹತ್ತರ ಘಟಪ್ರಭೆಯ ತಡಸಲು ನೋಡತಕ್ಕಂಥಾದಿರುತ್ತದೆ.

ಕೃಷ್ಣಾ. — ಸಾತಾರೆಯ ಜಿಲ್ಲೆಯಲ್ಲಿ ಸಹ್ಯಾದ್ರಿಯ ಅತ್ಯುನ್ನತ ಪ್ರದೇಶವಾದ ಮಹಾ ಬಳೇಶ್ವರವೆಂಬಲ್ಲಿ ಈ ಹೊಳೆಯು ಉಗಮವಾಗಿ ಸಾತಾರೆಯ ಜಿಲ್ಲೆಯಲ್ಲಿಯೂ ಕೊಲ್ಲಾ ಪುರ, ಮಿರ್ಜೆ, ಸಾಂಗಲಿ, ಸಂಸ್ಥಾನಗಳಲ್ಲಿಯೂ ಆಗ್ನೇಯಕ್ಕೆ ಹರಿದು ಬೆಳಗಾವೀ ಜಿಲ್ಲೆ ಯನ್ನು ಪ್ರವೇಶಿಸುತ್ತವೆ. ಈ ಜಿಲ್ಲೆಯ ಚಿಕ್ಕೋಡಿ, ಅಥಣೀ ತಾಲೂಕುಗಳಲ್ಲಿ ಡೊಂಕ ಡೊಂಕಾಗಿ ಪೂರ್ವಕ್ಕೆ ಹರಿದು ವಿಜಾಪುರ ಜಿಲ್ಲೆಯನ್ನು ಪ್ರವೇಶಿಸಿ, ಬಾಗಲಕೋಟೆ, ಹುನಗುಂದ ತಾಲೂಕುಗಳ ಉತ್ತರ ಮೇರೆಯಾಗಿ ಪೂರ್ವಕ್ಕೆ ಹರಿದು ನಿಜಾಮನ ರಾಜ್ಯ ದಲ್ಲಿ ಸೇರುತ್ತದೆ. ಆ ರಾಜ್ಯದಲ್ಲಿಯೂ ಪೂರ್ವಕ್ಕೆ ಹರಿದು ಕೃಷ್ಣೆಯು ಪೂರ್ವ ಸಮು ದ್ರಕ್ಕೆ ಕೂಡುತ್ತದೆ. ಉಗಮದಿಂದ ಮುಖದ ವರೆಗೆ ಇದರ ಉದ್ದಳತೆಯು ೭೦೦ ಮೈಲಿ ಗಿಂತ ಹೆಚ್ಚಿರುತ್ತದೆ. ಉತ್ತರ ಕರ್ನಾಟಕದಲ್ಲಿ ಕೃಷ್ಣೆಯೇ ಯೆಲ್ಲಕ್ಕೂ ದೊಡ್ಡ ಹೊಳೆ ಯುಂಟು. ಇದಕ್ಕೆ ತುಂಗಭದ್ರಾ, ಮಲಾಪಹಾರಿ, ಘಟಪ್ರಭಾ, ಭೀಮಾ ಮುಂತಾದ ದೊಡ್ಡ ದೊಡ್ಡ ನದಿಗಳು ಕೂಡುವ ಕಾರಣ ಇದರ ಪ್ರವಾಹವು ಮುಂದ ಮುಂದಕ್ಕೆ ಹೋದ ಹಾಗೆ ಬಹು ದೊಡ್ಡದಾಗುತ್ತ ನಡಿದದೆ. ಚಿಕ್ಕೋಡೀ ತಾಲೂಕಿನಲ್ಲಿ ಕೃಷ್ಣೆಗೆ ಪಂಚಗಂಗಾ, ವೇದಗಂಗಾ, ದೂಧಗಂಗಾ ಯೆಂಬ ಸಣ್ಣ ಹೊಳೆಗಳು ಕೂಡುತ್ತವೆ.

---

* ಗಟ್ಟವೆರಿ, ಗಟ್ಟದ ಸರುವು, ಯೆಂಬ ಹೆಸರಿನಿಂದ ಉಂಟಾಗಿರುತ್ತದೆ.

ಡೋಣಿಯು.— ಇದು ಜತ್ತಿಯ ಸಂಸ್ಥಾನಲ್ಲಿ ಉಗಮವಾಗಿ, ಮುದ್ದೆಬಿಹಾಳ ತಾಲೂಕಿನಲ್ಲಿ ಪೂರ್ವಕ್ಕೂ ಆಗ್ನೇಯಕ್ಕೂ ಹರಿದು ನಿಜಾಮನ ರಾಜ್ಯವನ್ನು ಪ್ರವೇಶಿಸಿ ಕೃಷ್ಣೆಗೆ ಕೂಡುತ್ತದೆ. ಇದರ ಉದ್ದಳತೆ ೧೨೫ ಮೈಲು. ಡೋಣಿಯ ನೀರು ಮಳೆಗಾಲದಲ್ಲಿ ಮಾತ್ರ ಶೀ ಇರುತ್ತದೆ; ಉಳಿದ ಎಂಟು ತಿಂಗಳಲ್ಲಿ ಸೌಳಾಗುವದು.

ಭೀಮಾ.— ಈ ಹೊಳೆಯು ವಿಜಾಪುರ ಜಿಲ್ಲೆಯ ಉತ್ತರ ಮೇರೆಯಲ್ಲಿ, ಅಂದರೆ ದಕ್ಷಿಣ ಮಹಾರಾಷ್ಟ್ರದ ಉತ್ತರ ಮೇರೆಯಲ್ಲಿ, ಸುಮಾರು ೮೦ ಮೈಲು ಹರಿದು ನಿಜಾಮನ ರಾಜ್ಯವನ್ನು ಶೇರಿ ಕೃಷ್ಣೆಗೆ ಕೂಡುತ್ತದೆ. ಇದರ ಉದ್ದಳತೆ ಸುಮಾರು ೨೫೦ ಮೈಲು.

## ತಡಸಲುಗಳು.

ಗೆರಸಪ್ಪೆಯ ತಡಸಲು.— ಇದಕ್ಕೆ ಕೋಡಕಣಿಯ ತಡಸಲೆಂತಲೂ ಜೋಗೆಂತಲೂ ಹೆಸರುಗಳಿವೆ. ಇದು ಕಾನಡಾ ಜಿಲ್ಲೆಯಲ್ಲಿ ಗೆರಸಪ್ಪೆಯ ಪೂರ್ವಕ್ಕೆ ೧೮ ಮೈಲಿನ ಮೇಲೆ ಶರಾವತಿಯ ಪ್ರವಾಹದಿಂದ ಉಂಟಾಗಿರುತ್ತದೆ. ಈ ಹೊಳೆಯು ಸಹ್ಯಾದ್ರಿಯ ನೆತ್ತಿಯ ಮೇಲಿಂದ ನಾಲ್ಕು ಬೇರೆ ಬೇರೆ ಎಸಳುಗಳಾಗಿ ೮೩೦ ಫೂಟು ಆಳವಾದ ತಗ್ಗಿನೊಳಗೆ ಬೀಳುತ್ತದೆ. ಗುಡ್ಡದ ನೆತ್ತಿಯ ಮೇಲೆ ಬೀಳುವ ಸ್ಥಳದ ಹಿಂಭಾಗದಲ್ಲಿ ಹೊಳೆಯ ಪಾತ್ರೆಯು ೨೩೦ ಫೂಟು ಅಗಲಾಗಿರುತ್ತದೆ. ಹೊಳೆ ಬೀಳುವ ಸ್ಥಳದಲ್ಲಿ ಗುಡ್ಡದ ಅಂಚು ಹಿಡಿ ಸಹಿತ ಖುರಪೆಯ ಆಕಾರವಾಗಿರುತ್ತದೆ; ಖುರಪೆಯಂತೆ ಮಣಿದ ಭಾಗವು ಕಾರವಾಡದ ದಿಕ್ಕಿನಲ್ಲಿ, ಹಿಡಿಯಂತೆ ಸರಳಾಗಿದ್ದ ಭಾಗವು ಮಂಗಳೂರಿನ ದಿಕ್ಕಿನಲ್ಲಿ ಇರುತ್ತವೆ. ಉತ್ತರದ ವಕ್ರಭಾಗದ ಮೇಲಿಂದ ಯೆರಡು ಸರಳುಗಳೂ ದಕ್ಷಿಣದ ಸರಳ ಭಾಗದ ಮೇಲಿಂದ ಯೆರಡು ಸರಳುಗಳೂ ಬೀಳುತ್ತವೆ. ಈ ನಾಲ್ಕು ಸರಳುಗಳಿಗೆ ಯುರೋಪಿಯನ್ ಪ್ರೇಕ್ಷಕರು ರಾಜಾ, ರೋಅರರ (ಅಬ್ಬರಗಡಕ) ರಾಕೇಟ (ಬಾಣ) ಡೇಮ ಬ್ಲಾಂಕಿ (ಬಿಳಿ ಮುದಿಕೆ), ಯೆಂಬ ಹೆಸರುಗಳನ್ನು ಕೊಟ್ಟದ್ದಾರೆ. ಎಲ್ಲಕ್ಕೂ ಉತ್ತರಕ್ಕೆ, ಅಂದರೆ ಕಾರವಾಡದ ದಿಕ್ಕಿನಲ್ಲಿ, ರಾಜಾ ಯೆಂಬ ಸರಳು ಬೀಳುತ್ತದೆ. ಅದರ ದಕ್ಷಿಣಕ್ಕೆ ಸುಮಾರು ೧,೦೦೦ ಫೂಟಿನ ಅಂತರದ ಮೇಲೆ ಅಬ್ಬರಗಡಕವೆಂಬ ಸರಳು ಬೀಳುತ್ತದೆ. ಇದರ ಅಬ್ಬರ ಬಹಳ, ಎರಡು ಮೈಲಿಗಿಂತ ಹೆಚ್ಚು ದೂರ ಕೇಳಿಸುತ್ತದೆ. ಬೀಳುವ ಮಾರ್ಗದಲ್ಲಿ ಅರ್ಧದ ಕೆಳಗೆ ರಾಜಾ, ಅಬ್ಬರಗಡಕ, ಇವೆರಡೂ ಒಟ್ಟುಗೂಡಿ ಕೆಳಗಿನ ಮಡುವಿನಲ್ಲಿ ಬೀಳುತ್ತವೆ. ಅಬ್ಬರಗಡಕದ ದಕ್ಷಿಣಕ್ಕೆ ೨೦೦ ಫೂಟಿನ ಮೇಲೆ ಬಾಣವೆಂಬ ಸರಳು ಬೀಳುತ್ತದೆ. ಇದು ವೊಂದೇ ಸವನಾಗಿ ಕೆಳಗೆ ಬೀಳದೆ ಅಲ್ಲಲ್ಲಿಗೆ ಮುಂದಕ್ಕೆ ಹಾದಂಥ ನಾಲಿಗೆಗಲ್ಲುಗಳ ಮೇಲೆ ಬೀಳುತ್ತ ಬಾಣಗಳಂತೆ ನೀರಿನ ಧಾರೆಗಳನ್ನು ಮೇಲಕ್ಕೆ ಹಾರಿಸುತ್ತ ಕೆಳಗಿಳಿಯುತ್ತದೆ. ಬಾಣದ ದಕ್ಷಿಣಕ್ಕೆ ೫೦೦ ಫೂಟಿನ ಮೇಲೆ ಬಿಳಿಮುದಿಕೆ ಎಂಬ ಸರಳು ಬೀಳುತ್ತದೆ. ಇದು ಬಹಳ ಸಪ್ಪಳ ಮಾಡದೆ, ಇಳಿಜಾರಾದ ಗುಡ್ಡದ ಮೋರೆಯ ಮೇಲಿಂದ ಬಹಳ ಅಗಲಾಗಿ ಬಿಳಿ ನೊರೆಯ ರೂಪದಿಂದ

ಸಾವಕಾಶವಾಗಿ ಇಳಿಯುತ್ತ ತಳಕ್ಕೆ ಹೋಗುತ್ತದೆ. ಅದರಿಂದ ಮೇಲಿನಿಂದ ಕೆಳತನಕ ಮಿಂಚುವಂಥ ಬೆಳ್ಳಿಯ ತೆರೆಗಳು ಪಸರಿಸಿದಂತೆ ತೋರುತ್ತದೆ. ಈ ನಾಲ್ಕೂ ಸರಳುಗಳು ಬೀಳುವ ತಗ್ಗಿನಲ್ಲಿ ದೊಡ್ಡದೊಂದು ಮಡುವಾಗಿದೆ. ಅದು ೧೩೦ ಫೂಟು ಆಳವಿರುವದು.

ಈ ತಡಸಲಿನಲ್ಲಿ ಜೂನ ತಿಂಗಳಿನಿಂದ ನವಂಬರಿನ ವರೆಗೆ ಬಹು ದೊಡ್ಡ ಓಘವಿರುತ್ತದೆ. ಆಗ ನೀರಿನ ತುಂತುರ್ವನಿಗಳು ಬಹು ನಿಬಿಡವಾಗಿ ಮೇಲಕ್ಕೇರಿ, ಬೀಳುವ ಪ್ರವಾಹಗಳನ್ನು ಮುಚ್ಚುವ ಕಾರಣ ಪ್ರೇಕ್ಷಕರಿಗೆ ಮನದಣಿಯಾಗಿ ನೋಡಲಿಕ್ಕೆ ಅನುಕೂಲವಾಗುವದಿಲ್ಲ. ದಿಜೆಂಬರಿನಿಂದ ಮಾರ್ಚ ತಿಂಗಳಿನ ವರೆಗೆ ನೋಡಲಿಕ್ಕೆ ಬಹು ಸರಸಾದ ಕಾಲವು. ಈ ಅವಧಿಯಲ್ಲಿ ಹೊಳೆಯ ಪ್ರವಾಹವು ಬಹಳ ದೊಡ್ಡದೂ ಇರುವದಿಲ್ಲ, ಬಹಳ ಸಣ್ಣದೂ ಆಗಿರುವದಿಲ್ಲ. ಆದರೂ ಮೇಲೆ ಹೇಳಿದ ನಾಲ್ಕೂ ಸರಳುಗಳು ಅರ್ಧದ ಕೆಳಗೆ ತುಷಾರಗಳ ಧೂಮ್ರದಿಂದ ಮುಚ್ಚಿರುತ್ತವೆ. ಈ ಧೂಮ್ರವು ತೆಳ್ಳಗಾಗಿ ಗುಡ್ಡದ ನೆತ್ತಿಯ ಮೇಲೆ ಏರುತ್ತಿರುವ ಕಾರಣ ಬೆಳಿಗ್ಗೂ ಸಾಯಂಕಾಲಕ್ಕೂ ಇವುಗಳೊಳಗಿಂದ ಸೂರ್ಯ ಕಿರಣಗಳ ಪರಾವರ್ತನವಾಗಿ, ನಾನಾ ಪ್ರಕಾರದ ಬಣ್ಣಗಳುಳ್ಳಂಥ ಇಂದ್ರ ಧನುಷ್ಯಗಳು ಬಹು ಮನೋಹರವಾಗಿ ಕಾಣಿಸುತ್ತವೆ. ಈ ತಡಸಲಿನ ಗಾಂಭೀರ್ಯ ಭವ್ಯತ್ವಗಳಿಂದ ನೋಡುವವರು ಚಕಿತರಾಗಿ ಅತ್ಯಾಶ್ಚರ್ಯ ಪಡುವರು. ಭೂಮಿಯಲ್ಲಿ ಗೆರಸಪ್ಪೆಯ ತಡಸಲು ವೊಂದು ಬಗೆಯಿಂದ ಯೆಲ್ಲಕ್ಕೂ ಮೇಲಾದದ್ದೆಂದು ಹೇಳಬಹುದು. ಆಲ್ಪಸ ಪರ್ವತದಲ್ಲಿ ಇದಕ್ಕೂ ಎತ್ತರವಾದಂಥ ತಡಸಲುಗಳು ಯೆರಡಿರುತ್ತವೆ. ಒಂದು ೧೦೦೦ ಫೂಟುಗಳ ಮೇಲಿಂದ, ಮತ್ತೊಂದು ೨೪೦೦ ಫೂಟುಗಳ ಮೇಲಿಂದ ಗುಡ್ಡದ ಕೆಳಗೆ ಬೀಳುತ್ತದೆ. ಆದರೆ ಆ ತಡಸಲುಗಳ ಪ್ರವಾಹಗಳು ಗೆರಸಪ್ಪೆಯ ಪ್ರವಾಹಗಳ ಹತ್ತನೇ ಪಾಲಷ್ಟು ಸಹ ದೊಡ್ಡವಿರುವದಿಲ್ಲ. ಭೂಮಿಯಲ್ಲಿ ಹೆಸರಾದ ಅಮೇರಿಕದ ನಯಾಗರವೆಂಬ ತಡಸಲಿನಲ್ಲಿ ಗೆರಸಪ್ಪೆಯ ಹತ್ತು ಪಾಲಷ್ಟು ನೀರು ಬೀಳುತ್ತದೆ; ಆದರೆ ಅದರ ಯೆತ್ತರವು ೧೬೪ ಫೂಟಗಿಂತ ಹೆಚ್ಚಿಲ್ಲ. ಆದದರಿಂದ ಗೆರಸಪ್ಪೆಯ ತಡಸಲಿನಷ್ಟು ಯೆತ್ತರದ ಮೇಲಿಂದ ಅದರಷ್ಟು ದೊಡ್ಡ ಪ್ರವಾಹವು ಭೂಮಿಯ ಮೇಲೆ ಯೆಲ್ಲಿಯೂ ಬೀಳುವದಿಲ್ಲೆಂದೆನ್ನಲಿಕ್ಕೆ ಅಡ್ಡಿ ಇಲ್ಲ.

ಉಂಛಲಿಯ ತಡಸಲು. — ಕಾನಡಾ ಜಿಲ್ಲೆಯಲ್ಲಿ ಸಿದ್ದಾಪುರದ ಈಶಾನ್ಯಕ್ಕೆ ೧೨ ಮೈಲಿನ ಮೇಲೆ ಉಂಛಲಿ ಯೆಂಬ ಸಣ್ಣ ಹಳ್ಳಿಯುಂಟು. ಅದರ ಬಳಿಯಲ್ಲಿ ತದಡೀ ಹೊಳೆಯು ಸಹ್ಯಾದ್ರಿಯ ಮೇಲಿಂದ ೪೦೦ ಫೂಟು ಆಳವಾದ ತಗ್ಗಿನಲ್ಲಿ ಬಿದ್ದು ಬಹು ಮನೋಹರವಾದ ತಡಸಲನ್ನುಂಟು ಮಾಡಿರುತ್ತದೆ. ಸುತ್ತುಮುತ್ತಲಿನ ಅಡಿಕೆಯ ತೋಟಗಳಿಂದಲೂ, ನಾನಾ ಪ್ರಕಾರದ ಬಹು ಭವ್ಯವಾದ ವೃಕ್ಷಗಳ ಅಡವಿಯಿಂದಲೂ ಈ ತಡಸಲಿಗೆ ಅತಿ ವಿಲಕ್ಷಣವಾದ ಶೋಭೆಯುಂಟಾಗಿದೆ. ಕಾನಡಾ ಜಿಲ್ಲೆಯ ಒಬ್ಬ ಕಲೆಕ್ಟರನಾದ ಲಶಿಂಗಟನ್ನನೆಂಬ ಧೊರೆಯು ಇದನ್ನು ಮೊದಲು ನೋಡಿದ ಕಾರಣ ಇದಕ್ಕೆ ಇಂಗ್ಲಿಷದಲ್ಲಿ "ಲಶಿಂಗಟನ್ ಫಾಲ್ಸ್" ಎಂಬ ಹೆಸರು ಬಂದದೆ.

ಲಾಳಗುಳಿಯ ತಡಸಲು.—ಕಾನಡಾ ಜಿಲ್ಲೆಯಲ್ಲಿ ಯಲ್ಲಾಪುರದ ಉತ್ತರಕ್ಕೆ ೮ ಮೈಲಿನ ಮೇಲೆ ಲಾಳಗುಳಿ ಯೆಂಬ ಹಳ್ಳಿಯುಂಟು. ಅದರ ಬಳಿಯಲ್ಲಿ ಕಾಳೀನದಿಯು ಸಹ್ಯಾದ್ರಿಯ ಇಳಕಲಿನ ಮೇಲಿಂದ ಹರಿಯುತ್ತ ಸುಮಾರು ೩೦೦ ಪೂಟು ಕೆಳಗಿಳಿಯುತ್ತದೆ. ಅಂದರೆ ಬೇರೆ ತಡಸಲುಗಳಂತೆ ಈ ನದಿಯು ವೊಮ್ಮೇಲೆ ಯೆತ್ತರವಾದ ಗುಡ್ಡದ ಕೆಳಗೆ ಬೀಳದೆ, ಪಾವಟಿಗಳಂಥ ಪ್ರದೇಶದ ಮೇಲಿಂದ ಹರಿಯುತ್ತ, ಅಲ್ಲಲ್ಲಿಗೆ ೧೦, ೨೦ ಪೂಟು ಎತ್ತರವಾದ ಪ್ರದೇಶಗಳ ಮೇಲಿಂದ ಬೀಳುತ್ತ ಅಸಂಖ್ಯ ಸಣ್ಣ ಸಣ್ಣ ತಡಸಲುಗಳನ್ನುಂಟು ಮಾಡಿದೆ. ಪ್ರತಿ ಒಂದು ತಡಸಲಿನ ಕೆಳಗೆ ಸಣ್ಣದೊಂದು ಮಡುವಿರುವದು. ಆ ಮಡುವಿನಲ್ಲಿ ಬಿದ್ದ ನೀರು ಕಾರಂಜಿಯಂತೆ ಪುಟಿದು ಮುಂದಕ್ಕೆ ಸಾಗುತ್ತದೆ. ಅದರಿಂದ ಈ ತಡಸಲುಗಳ ಸಾಲು ನೋಡುವವರಿಗೆ ಬಹು ರಮಣೀಯವಾಗಿ ಕಾಣುತ್ತದೆ. ಸುತ್ತುಮುತ್ತು ಹಬ್ಬಿರುವ ಕಿರಿ ಅಡವಿಯೊಳಗಿಂದ ಹತ್ತೆಂಟು ಮೈಲು ದೂರ ಕೇಳಿಸುವಷ್ಟು ಅಬ್ಬರದಿಂದ ಯೆಡೆಬಿಡದೆ ಬೀಳುತ್ತಿರುವ ಈ ತಡಸಲುಗಳ ಜಲಧಾರೆಯ ಗಾಂಭೀರ್ಯವನ್ನು ನೋಡಿ ಪ್ರೇಕ್ಷಕರು ಕೌತುಕದಿಂದಲೂ ಭಯದಿಂದಲೂ ಚಕಿತರಾಗುತ್ತಾರೆ. ಗುಡ್ಡದ ಅತ್ಯುನ್ನತವಾದ ಪ್ರದೇಶದಲ್ಲಿ ಕಾಳೀ ನದಿಯು ಸುಮಾರು ೩೦೦ ಪೂಟು ಆಳವಾಗಿ ಗುಡ್ಡವನ್ನು ಕೊರಿದು ನಡುವಿನ ದರಿಯೊಳಗಿಂದ ಹರಿಯುತ್ತದೆ. ಆ ಯೆತ್ತರವಾದ ದಂಡೆಯ ಮೇಲೆ ಕೋಟೆಯಂಥಾದೊಂದು ಹನುಮಂತನ ಗುಡಿ ಇರುತ್ತದೆ. ಪೂರ್ವ ಕಾಲದ ಸ್ವಾದೆಯ ಅರಸರು ಅಪರಾಧಿಗಳನ್ನು ಆ ದಂಡೆಯ ಮೇಲಿಂದ ಕೆಳಗೆ ನುಗಿಸಿ ಕೊಲ್ಲುವರೆಂದು ಹೇಳುತ್ತಾರೆ.

ಮಾಗೋಡದ ತಡಸಲು.—ಯಲ್ಲಾಪುರದ ನೈರುತ್ಯದಲ್ಲಿ ೨೦ ಮೈಲಿನ ಮೇಲೆ ಮಾಗೋಡೆಂಬ ಹಳ್ಳಿ ಇರುತ್ತದೆ. ಅದರ ಬಳಿಯಲ್ಲಿ ಬೆಡತಿ, ಅಥವಾ ಗಂಗಾವಳಿ ಯೆಂಬ ಹೊಳೆಯ ಪ್ರವಾಹವು ಸಹ್ಯಾದ್ರಿಯ ಇಳಕಲಿನ ಪ್ರದೇಶದಲ್ಲಿ ಸುಮಾರು ೮೦೦ ಪೂಟು ಕೆಳಗಿಳಿದು ಹೋಗುವದರಿಂದ ಲಾಳಗುಳಿಯ ತಡಸಲುಗಳಂತೆ ಹಲವು ತಡಸಲುಗಳಾಗಿರುತ್ತವೆ. ಆದರೆ ಈ ತಡಸಲುಗಳ ಪ್ರವಾಹವು ೧೦೦ರಿಂದ ೨೦೦ ಪೂಟು ಎತ್ತರವಾದ ಕಡಿವಾಡಿಗಳ ಮೇಲಿಂದ ಬೀಳುತ್ತ ಹೋಗುತ್ತದೆ. ಅದರಿಂದ ಲಾಳಗುಳಿಯ ತಡಸಲುಗಳಿಗಿಂತ ಈ ತಡಸಲುಗಳು ಹೆಚ್ಚು ಭವ್ಯವಾಗಿಯೂ ಸುಂದರವಾಗಿಯೂ ಕಾಣುತ್ತವೆ.

ಸೊಗಲದ ತಡಸಲು.—ಬೆಳಗಾವೀ ಜಿಲ್ಲೆಯಲ್ಲಿ ಮುನ್ನೊಳ್ಳಿಯ ಪಶ್ಚಿಮದಲ್ಲಿ ೧೦ ಮೈಲಿನ ಮೇಲೆ ಸೊಗಲವೆಂಬ ಗ್ರಾಮವಿರುತ್ತದೆ. ಅದರ ಬಳಿಯಲ್ಲಿ ಹಳ್ಳದ ಪ್ರವಾಹದಿಂದ ಮೂರು ತಡಸಲುಗಳಾಗಿವೆ. ಮೊದಲಿನ ಯೆರಡು ತಡಸಲುಗಳಲ್ಲಿ ನೀರು ಬೀಳುವ ತಗ್ಗುಗಳು ಹತ್ತೆಂಟು ಪೂಟುಗಳಿಗಿಂತ ಹೆಚ್ಚು ಆಳವಿಲ್ಲ. ಆದರೆ ಮೂರನೇ ತಡಸಲಿನಲ್ಲಿ ಸುಮಾರು ೬೦ ಪೂಟುಗಳ ಮೇಲಿಂದ ಪ್ರವಾಹವು ಕೆಳಗಿನ ಮಡುವಿನಲ್ಲಿ ಬೀಳುತ್ತದೆ. ಈ ತಡಸಲಿನ ಸುತ್ತು ಮುತ್ತು ಎತ್ತರವಾದ ವೃಕ್ಷಗಳ ಬನವೂ ಬಳಿಯಲ್ಲ ವೊಂದು [illegible] ಡಿಯೂ ಇರುವದರಿಂದ ಪ್ರವಾಸಿಗಳಿಗೆ ವಿಶ್ರಾಂತಿ

ಪಡಿಯಲಿಕ್ಕೆ ಈ ಸ್ಥಳವು ಬಹು ರಮಣೀಯವಾಗಿರುತ್ತದೆ. ಈ ಹಳ್ಳವು ೫ ಮೈಲು ದಕ್ಷಿಣಕ್ಕೆ ಹರಿದು ಮಲಾಪಹಾರಿಗೆ ಕೂಡುತ್ತದೆ.

ಗೋಕಾವಿ ತಡಸಲು.— ಗೋಕಾವಿಯ ವಾಯವ್ಯದಲ್ಲಿ ೩½ ಮೈಲಿನ ಮೇಲೆ ಘಟಪ್ರಭೆಯ ಪ್ರವಾಹದಿಂದ ಈ ತಡಸಲು ಉಂಟಾಗಿರುತ್ತದೆ. ಈ ಪ್ರವಾಹವು ವೊಂದು ಗುಡ್ಡದ ಮೇಲಿಂದ ೧೭೦ ಫೂಟು ಆಳವಾದ ತಗ್ಗಿನಲ್ಲಿ ಬೀಳುತ್ತದೆ. ಗುಡ್ಡದ ನೆತ್ತಿಯ ಮೇಲೆ ಹೊಳೆ ತುಂಬಿದಾಗ ಅದರ ಪಾತ್ರೆಯ ಅಗಲು ೫೮೦ ಫೂಟು ಇರುತ್ತದೆ. ಪ್ರವಾಹ ಬೀಳುವಲ್ಲಿ ಇರುವ ಮಡುವು ಹೊಳೆ ತುಂಬಿದಾಗ ೭೫ ಫೂಟು ಆಳವಾಗಿರುತ್ತದೆ; ಬೇಸಿಗೆಯಲ್ಲಿ ೪೩ ಫೂಟು ಇರುವದು. ಅಮೇರಿಕದೊಳಗಿನ ಅತಿ ವಿಖ್ಯಾತವಾದ ನಯಾಗರವೆಂಬ ತಡಸಲಿಗಿಂದ ಗೋಕಾವಿಯ ತಡಸಲು ೭ ಫೂಟು ಹೆಚ್ಚು ಯೆತ್ತರದ ಮೇಲಿಂದ ಬೀಳುತ್ತದೆ. ಆದರೆ ಇದರ ಪ್ರವಾಹವು ನಯಾಗರದ ಪ್ರವಾಹದ ಮೂರನೇ ಪಾಲಷ್ಟು ಮಾತ್ರ ಇರುವದು. ಗೆರಸಪ್ಪೆಯ ನಾಲ್ಕೂ ತಡಸಲುಗಳ ಪ್ರವಾಹಗಳು ಕೂಡಿ ಗೋಕಾವಿಯ ತಡಸಲಿನ ಪ್ರವಾಹದ ಮೂರನೇ ಪಾಲಷ್ಟು ಮಾತ್ರ ಆಗುವವು. ಆದರೆ ಅದರ ಯೆತ್ತರವು ಗೋಕಾವಿಯ ತಡಸಲಿನ ೫ ಪಾಲು ಹೆಚ್ಚಿರುವದು. ಗೋಕಾವಿಯ ತಡಸಲು ವೊಂದೇ ಪ್ರವಾಹದಿಂದ ಬೀಳುವದಿಲ್ಲ; ಮೂರು ಬೇರೆ ಬೇರೆ ಸರಳುಗಳಾಗಿ ಬೀಳುತ್ತದೆ. ಇವುಗಳಲ್ಲಿ ಯೆರಡು ಬುಡ ತನಕ ಅವಿಚ್ಛಿನ್ನವಾಗಿ ಇಳಿಯುತ್ತವೆ; ಮೂರನೇದು ಅರ್ಧಮಾರ್ಗದಲ್ಲಿ ವೊಂದು ಶಿಲೆಯ ಮೇಲೆ ಬಿದ್ದು ವೊಡಿಯುತ್ತದೆ. ಅಗಟಂಬರಿನಿಂದ ದಶಂಬರಿನ ವರೆಗೆ ಈ ತಡಸಲು ಬಹು ಸರಸಾಗಿ ಕಾಣಿಸುತ್ತದೆ. ಆದರೂ ಬೀಳುವ ಜಲಧಾರೆಯಿಂದ ಆಕಾಶಕ್ಕೇರುವ ತುಷಾರ ಧೂಮ್ರದಿಂದ ಆ ಧಾರೆಯ ಕೆಳಗಿನ ಅರ್ಧ ಭಾಗವು ಮುಚ್ಚಿರುತ್ತದೆ. ಈ ಧೂಮ್ರವು ಗುಡ್ಡದ ನೆತ್ತಿಯ ಮೇಲೆ ಬಹಳ ದೂರ ವರೆಗೆ ಯೇರಿ, ಗಾಳಿಯಿಂದ ನಾಲ್ಕೂ ಕಡೆಗೆ ಹರಿಬಿದ್ದು ಮಳೆಯಂತೆ ಮತ್ತೆ ಕೆಳಗೆ ಬೀಳುವದು. ಈ ಧೂಮ್ರದೊಳಗಿಂದ ಬೆಳಿಗ್ಯೂ ಸಾಯಂಕಾಲಕ್ಕೂ ಬಹು ಸುಂದರವಾದ ನಾನಾ ಪ್ರಕಾರದ ಬಣ್ಣಗಳುಳ್ಳಂಥ ಇಂದ್ರಧನುಷ್ಯಗಳು ಕಂಗೊಳಿಸುವವು. ತಡಸಲಿನ ಬಳಿಯಲ್ಲಿ ಪುರಾತನ ಕಾಲದ ಮಹಾಲಿಂಗೇಶ್ವರವೆಂಬದೊಂದು ಭವ್ಯವಾದ ದೇವಾಲಯವಿರುತ್ತದೆ. ಗೋಕಾವಿಯ ನೆರೆಯಲ್ಲಿ ಅಡವಿಯು ಯೆಲ್ಲಿಯೂ ಇಲ್ಲದಿದ್ದಾಗ್ಯೂ, ತಡಸಲಿನ ಸುತ್ತುಮುತ್ತು ಹುಲಗಲಿ, ಜಾಲಿ, ಬಿದರು, ಮುಂತಾದ ವೃಕ್ಷಗಳ ಬನಗಳಿರುತ್ತವೆ. ಈ ತಡಸಲಿನ ಬಳಿಯಲ್ಲಿಂದ ಹೊಸ ಕಾವಲಿಯನ್ನು ತೆಗಿಯುವ ಕೆಲಸವನ್ನು ಸರಕಾರದವರು ಬಹು ದಿವಸದಿಂದ ನಡಿಸಿದ್ದಾರೆ.

## ಮಳೆಯೂ ಹವೆಯೂ.

ಈ ಮುಂಬಯಿ ಕರ್ನಾಟಕ ಭಾಗದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಕೊಂಕಣ, ಮಲ್ಲಾಡ, ಮಲ್ಲಾಡದ ಶೆರಗು, ಬೈಲು ಶೀಮೆ, ಯೆಂಬ ನಾಲ್ಕು ವಿಭಾಗಗಳನ್ನು ಹಿಂದೆ ಮಾಡಿದ್ದೇವೆ. ಈ ನಾಲ್ಕು ವಿಭಾಗಗಳಲ್ಲಿ ಮಳೆಯ ಪ್ರಮಾಣವು ಬೇರೆ ಬೇರೆ ಇರುತ್ತದೆ.

ಘಟ್ಟದ ಕೆಳಗೆ, ಅಂದರೆ ಕೊಂಕಣ ಭಾಗದಲ್ಲಿ ಮಳೆಯು ಯೆಲ್ಲಕ್ಕೂ ಹೆಚ್ಚು ಬೀಳುತ್ತದೆ. ಸರಾಸರೀ ಮಾನದಿಂದ ವರ್ಷದೊಳಗೆ ೧೩೦ ಇಂಚು ಈ ಕೊಂಕಣ ಭಾಗದಲ್ಲಿ ಬೀಳುತ್ತದೆಂದು ಹೇಳ ಬಹುದು. ಆದರೆ ಸಮುದ್ರತೀರದಲ್ಲಿ ಬೀಳುವಷ್ಟು ಮಳೆಯು ಸಹ್ಯಾದ್ರಿಯು ಅಡವಿಯಲ್ಲಿ ಬೀಳುವದಿಲ್ಲ. ಸಹ್ಯಾದ್ರಿಯ ನೆತ್ತಿಯ ಮೇಲೆ ಅಂದರೆ ಮಲ್ಲಾಡದ ಭಾಗದಲ್ಲಿ ಕೊಂಕಣಕ್ಕಿಂತ ಕಡಿಮೆ, ಅಂದರೆ ವರ್ಷದೊಳಗೆ ಸರಾಸರೀ ಮಾನದಿಂದ ೮೦ ಇಂಚು ಮಳೆ ಬೀಳುವದು. ಮಲ್ಲಾಡದ ಶರಗಿನಲ್ಲಿ ಇದಕ್ಕೂ ಕಡಿಮೆ, ಅಂದರೆ ವರ್ಷದೊಳಗೆ ಸರಾಸರೀ ಮಾನದಿಂದ ೩೫ ಇಂಚು. ಆದರೆ ಬೈಲು ಶೀಮೆಯ ಮಳೆಯ ಪ್ರಮಾಣವು ಯೆಲ್ಲಕ್ಕೂ ಕಡಿಮೆ ಇರುತ್ತದೆ. ಇಲ್ಲಿ ವರ್ಷದೊಳಗೆ ಸರಾಸರೀ ಮಾನದಿಂದ ೨೦ ಇಂಚಿಗಿಂತ ಹೆಚ್ಚು ಮಳೆ ಬೀಳುವದಿಲ್ಲ. ಇದರಿಂದ ವಿಜಾಪುರ, ಕಲಾದಗಿ, ಮುಂತಾದ ಬೈಲು ಶೀಮೆಯ ರುಕ್ಷ ಪ್ರದೇಶಗಳಲ್ಲಿ ಬೀಳುವ ಮಳೆಯ ಆರು ಪಾಲಿಗಿಂತ ಹೆಚ್ಚು ಕಾರವಾಡ, ಕುಮಟಾ, ಮುಂತಾದ ಸಮುದ್ರತೀರದ ಪ್ರದೇಶಗಳಲ್ಲಿ ವೃಷ್ಟಿಯಾಗುತ್ತದೆಂದು ತಿಳಿಯುತ್ತದೆ. ಘಟ್ಟದ ಮೇಲೆ ಸಹ್ಯಾದ್ರಿಯ ಅಡವಿಯಲ್ಲಿ, ಅಂದರೆ, ಸಿರಸಿ, ಯಲ್ಲಾಪುರ, ಹಲ್ಯಾಳ ತಾಲೂಕುಗಳಲ್ಲಿ ಯೆಲ್ಲಕ್ಕೂ ಹೆಚ್ಚು ಮಳೆಯಾಗುತ್ತದೆ. ಮಲ್ಲಾಡದ ಶರಗಿನಲ್ಲಿ ಮಧ್ಯಮ ಮಾನದಿಂದ ಪೈರಿಗೆ ಬೇಕಾಗುವಷ್ಟು ಮಳೆಯಾಗುತ್ತದೆನ್ನಲಿಕ್ಕೆ ಅಡ್ಡಿ ಇಲ್ಲ. ಕೊಂಕಣ, ಮಲ್ಲಾಡ, ಮಲ್ಲಾಡದ ಶರಗು, ಇಷ್ಟೆಲ್ಲ ಪ್ರದೇಶದಲ್ಲಿ ಮುಂಗಾರಿಯ ಮಳೆಯು ಹೆಚ್ಚು ಕಸುವಿನಿಂದ ನಿಯಮಿತ ಕಾಲಕ್ಕೆ ಬೀಳುತ್ತದೆ; ಹಿಂಗಾರಿಯ ಮಳೆಯು ಅಷ್ಟು ನಿಯಮಿತವಾದದ್ದಲ್ಲ. ಬೈಲು ಶೀಮೆಯಲ್ಲಿ ಹಿಂಗಾರಿಗಿಂತ ಮುಂಗಾರಿಯ ಮಳೆಯು ಹೆಚ್ಚು ಅನಿಯಮಿತವಾದದ್ದು; ಒಕ್ಕಲಿಗರು ಹಿಂಗಾರಿಯ ಮಳೆಯನ್ನು ನಂಬಿದಷ್ಟು ಮುಂಗಾರಿಯ ಮಳೆಯನ್ನು ನಂಬುವದಿಲ್ಲ; ಆದರೆ ಯೆಲ್ಲ ಕಡೆಯಲ್ಲಿ ಕೆರೆ ಭಾವಿಗಳಿಗೆ ಹಿಂಗಾರಿಯ ಮಳೆಯಿಂದಲೇ ನೀರು ಬರುವದು ವಿಶೇಷ; ಹೊಳೆಗಳು ಮುಂಗಾರಿಯ ಮಳೆಯಿಂದ ತುಂಬುತ್ತವೆ. ಯಾಕಂದರೆ ಅದು ಹೊಳೆಗಳ ಉಗಮ ಸ್ಥಾನಗಳಲ್ಲಿ ವಿಶೇಷವಾಗಿ ಬೀಳುತ್ತದೆ.

ಈ ಮುಂಬಯಿ ಕರ್ನಾಟಕ ಭಾಗದಲ್ಲಿ ವರ್ಷದೊಳಗಿನ ಸರಾಸರೀ ಶಕೆಯ ಮಾನವನ್ನು ನೋಡಿದರೆ ಅದು ಯೆಲ್ಲ ಕಡೆಯಲ್ಲಿ ಬಹುತರ ವೊಂದೇ ಪ್ರಮಾಣದ್ದು, ಅಂದರೆ ೭೫ರಿಂದ ೮೦ ಅಂಶದ ವರೆಗೆ, ಇರುತ್ತದೆಂದು ತಿಳಿಯುತ್ತದೆ. ಇದರಂತೆ ಯೆಲ್ಲ ಕಡೆಯಲ್ಲಿಯೂ ದಿಜೆಂಬರಿನ ಕಡೆಯಲ್ಲಿ ಯೆಲ್ಲಕ್ಕೂ ಕಡಿಮೆ ಶಕೆ, ಅಂದರೆ ಪರಮಾವಧಿಯ ಚಳಿ, ಇರುತ್ತದೆಂತಲೂ, ಎಪ್ರಿಲ ತಿಂಗಳಿನ ಕಡೆಯಲ್ಲಿ ಪರಮಾವಧಿಯ ಶಕೆ ಇರುತ್ತದೆಂತಲೂ ತಿಳಿಯುತ್ತದೆ. ಆದರೆ ಇಷ್ಟರಿಂದ ಈ ದೇಶದಲ್ಲೆಲ್ಲ ವೊಂದೇ ಮಾನದ ಶಕೆ, ಅಥವಾ ವೊಂದೇ ಪ್ರಕಾರದ ಹವೆ, ಇರುತ್ತದೆಂದು ಅನುಮಾನ ಮಾಡಲಾಗದು. ಎಲ್ಲ ಕಡೆಯಲ್ಲಿ ವರ್ಷದೊಳಗಿನ ಶಕೆಯ ಸರಾಸರೀ ಮಾನವು ವೊಂದೇ ಇದ್ದಾಗ್ಯೂ, ಬೇರೆ ಬೇರೆ ಕಡೆಯಲ್ಲಿ ನಿಕೃಷ್ಟ, ಪರಮಾವಧಿ, ಶಕೆಯ ಮಾನವು ಬೇರೆ ಬೇರೆ ಇರುತ್ತದೆ. ಇದರ ವಿವರ ಹ್ಯಾಗಂದರೆ—

| | ನಿಕೃಷ್ಟ. ದಿಜೆಂಬರಿನ ಕಡೆಯಲ್ಲಿ, ಅಂಶ. | ಪರಮಾವಧಿ. ಎಪ್ರಿಲಿನ ಕಡೆಯಲ್ಲಿ. ಅಂಶ. |
|---|---|---|
| ಸಮುದ್ರತೀರ . . . | ೭೫ | ೮೪ |
| ಯಲ್ಲಾಪುರ, ತಿರಸಿ . . | ೭೦ | ೯೦ |
| ಧಾರವಾಡ . . . . . | ೫೮ | ೯೯ |
| ಬೆಳಗಾವಿ . . . . . . | ೬೦ | ೧೦೦ |
| ಕಲಾದಗಿ . . . . . . | ೪೮ | ೧೧೦ |

ಈ ಪಟ್ಟಿಯಿಂದ ಪ್ರತಿ ವೊಂದು ಸ್ಥಳದ ಸರಾಸರೀ ಶಕೆಯ ಮಾನವು ಸ್ವಲ್ಪ ಹೆಚ್ಚು ಕಡಿಮೆ ೮೦ ಅಂಶ ಹೊರಡುತ್ತಿದ್ದಾಗ್ಯೂ, ಸಮುದ್ರತೀರದಲ್ಲಿ ಬೇಸಿಗೆ ಚಳಿಗಾಲಗಳ ಶಕೆಯಲ್ಲಿ ೯ ಅಂಶಕ್ಕಿಂತ ಹೆಚ್ಚು ಅಂತರವಿಲ್ಲೆಂದು ತಿಳಿಯುತ್ತದೆ. ಈ ಅಂತರವು ಮಲ್ಲಾಡದಲ್ಲಿ ೨೦ ಅಂಶಗಳ ವರೆಗೆ, ಮಲ್ಲಾಡದ ಶರಗಿನಲ್ಲಿ (ಬೆಳಗಾವಿ ಧಾರವಾಡಗಳಲ್ಲಿ) ಸುಮಾರು ೪೦ ಅಂಶಗಳ ವರೆಗೆ, ಬೈಲು ಶೀಮೆಯಲ್ಲಿ ೬೦ ಅಂಶಗಳ ವರೆಗೆ ಬೆಳಿಯುತ್ತದೆ. ಇದರಿಂದ ಈ ಬೇರೆ ಬೇರೆ ಸ್ಥಳಗಳಲ್ಲಿ ಚಳಿಗಾಲದ ಚಳಿಗೂ ಬೇಸಿಗೆಯ ಬಿಸಿಲಿಗೂ ಯೆಷ್ಟು ಹೆಚ್ಚು ಕಡಿಮೆ ಇರುತ್ತದೆಂಬುವದು ವ್ಯಕ್ತವಾಗುತ್ತದೆ. ಬೈಲು ಶೀಮೆಯಲ್ಲಿ ಚಳಿಗಾಲದ ಶಕೆಯ ಇಮ್ಮಡಿಗಿಂತ ಹೆಚ್ಚು ಬೇಸಿಗೆಯ ಶಕೆ ಇರುತ್ತದೆ; ಅಂದರೆ ಚಳಿಗಾಲದಲ್ಲಿ ಅಲ್ಲಿಯಷ್ಟು ಚಳಿಯೂ, ಬೇಸಿಗೆಯಲ್ಲಿ ಅಲ್ಲಿಯಷ್ಟು ಶಕೆಯೂ ಬೇರೆ ಯಾವ ಕಡೆಯಲ್ಲಿಯೂ ಇರುವದಿಲ್ಲ.

ಆದರೆ ಆರೋಗ್ಯದ ಮಾನ ನೋಡಿದರೆ, ಬೈಲು ಶೀಮೆಯಷ್ಟು ಆರೋಗ್ಯಕರವಾದ ಪ್ರದೇಶವು ಬೇರೆ ಯಾವದೂ ಅಲ್ಲೆಂದು ಅನುಭವದಿಂದ ತಿಳಿದದೆ. ಇಲ್ಲಿಯ ಹವೆಯಲ್ಲಿ ಆರ್ದ್ರತ್ವವು ಬಹುತರ ಇರುವದಿಲ್ಲ. ಅದರಿಂದ ಇಲ್ಲಿಯ ವೊಣ ಹವೆಯು ಶರೀರಕ್ಕೆ ಬಹಳ ಹಿತಕರವಾಗುತ್ತದೆ. ಈ ಹವೆಯಲ್ಲಿ ತಡಮಾಡಿ ಉಂಡರೂ, ಹೆಚ್ಚುಕಡಿಮೆ ಆಹಾರ ತಕ್ಕೊಂಡರೂ, ಶ್ರಮ ಮಾಡದಿದ್ದರೂ ತಡಿಯುತ್ತದೆ. ಜನರು ವಾಡಿಕೆಯಾಗಿ ನಿರೋಗಿಗಳಿರುವರು; ವ್ಯಾಳ್ಯ ವ್ಯಾಳ್ಯಕ್ಕೆ ಹಸಿವು ತಪ್ಪುವದಿಲ್ಲ. ಪರಸ್ಥರು ಯಾವ ಪ್ರದೇಶದಿಂದಲೇ ಈ ಹವೆಯೊಳಗೆ ಬರಲಿ, ಅವರಿಗೆ ಆರೋಗ್ಯವೆನಿಸುತ್ತದೆ. ಈ ಬೈಲು ಶೀಮೆಯಲ್ಲಿ, ವಿಶೇಷವಾಗಿ ನದೀತೀರದಲ್ಲಿ, ಮುಖ್ಯವಾಗಿ ಕೃಷ್ಣಾತೀರದಲ್ಲಿ, ಆರೋಗ್ಯವು ಯೆಲ್ಲಕ್ಕೂ ಹೆಚ್ಚು. ನದೀತೀರದ ಮನುಷ್ಯರು ಧಷ್ಟಪುಷ್ಟರಾಗಿಯೂ ಕಸುವುಳ್ಳವರಾಗಿಯೂ ಆಯಾಸಕ್ಕೆ ಹೆದರದವರಾಗಿಯೂ ಇರುತ್ತಾರೆ. ಆದರೆ ಬೈಲು ಶೀಮೆಯಲ್ಲಿ ಪಟಕೀ ಬೇನೆಯ ಉಪದ್ರವವಿದ್ದಷ್ಟು ಉಳಿದ ಮೂರು ವಿಭಾಗಗಳಲ್ಲಿ ಇರುವದಿಲ್ಲ. ಬೇಸಿಗೆಯಲ್ಲಿ ವೊಮ್ಮೆ ಹವೆ ಕೆಟ್ಟು ಈ ಬೇನೆ ಉದ್ಭವಿಸಿತೆಂದರೆ, ಊರಿಗೆ ಊರು ಹಾಳಾಗ ಬಹುದು. ಪಟಕಿಯು ಬಹು ಬೇಗ ಹಬ್ಬುತ್ತದೆ; ಒಳಿತಾಗಿ ಮಳೆ ಬೀಳುವ ವರೆಗೆ ಕಡಿಮೆಯಾಗುವದಿಲ್ಲ. ಮಲ್ಲಾಡದ ಶರಗಿನ ಹವೆಯು ಇಷ್ಟು ಆರೋಗ್ಯವಾದದ್ದಲ್ಲ.

ಇಲ್ಲಿಯ ಹವೆಯಲ್ಲಿ ಆರ್ದ್ರತ್ವವು ಬಹುತರ ಸರ್ವ ಕಾಲವೂ ಇರುತ್ತದೆ. ಬೇಸಿಗೆಯಲ್ಲಿ ಮಾತ್ರ ವೊಂದೆರಡು ತಿಂಗಳು ಹವೆಯಲ್ಲಿ ಆರ್ದ್ರತ್ವವಿರುವದಿಲ್ಲಾದ ಕಾರಣ ಆಗ ಜನರ ಆರೋಗ್ಯವು ನೆಟ್ಟಗಿರುತ್ತದೆ. ಉಳಿದ ಯಾವತ್ತು ಕಾಲದಲ್ಲಿ ಚಳಿಜ್ವರ, ನೆಗಡಿ, ಕೆಮ್ಮು, ಅಜೀರ್ಣ, ಮುಂತಾದ ರೋಗಗಳಿಗೆ ಹೆದರಿ ನಡಿಯ ಬೇಕಾಗುತ್ತವೆ. ವಿಷಮಜ್ವರ, ಸನ್ನಿಪಾತಗಳ ಭೀತಿ ಬಹಳ ಇರುತ್ತದೆ. ಆದರೆ ಪಟಕಿಯ ಉಪದ್ರವವು ಬೈಲು ಶೀಮೆಯಷ್ಟು ಇಲ್ಲ. ಒಂದು ವೇಳೆ ಬೇಸಿಗೆಯಲ್ಲಿ ಈ ರೋಗ ಹುಟ್ಟಿದರೂ ಬೇಗ ತಣ್ಣಗಾಗುತ್ತದೆ. ಮಲ್ಲಾಡದ ಹವೆ ರೋಗಕಾರಕವು. ಇದರಲ್ಲಿ ತೇವು ಬಹಳಿರುವದದಲ್ಲದೆ, ನೀರು ನಿರ್ದೋಷವಲ್ಲ. ಈ ಪ್ರದೇಶದಲ್ಲಿ ಅಡವಿ ಬಹಳ ಇರುವದರಿಂದ ಯೆಲೆ, ಬೇರು, ಮುಂತಾದ ವೃಕ್ಷಾವಯವಗಳು ನೀರೊಳಗೆ ಬಿದ್ದು ಕೊಳಿತು ಕ್ರಿಮಿಗಳನ್ನುಂಟು ಮಾಡುತ್ತವೆ. ಆ ಕ್ರಿಮಿಗಳು ಮನುಷ್ಯರ ಆರೋಗ್ಯವನ್ನು ಬಹು ಬೇಗ ಕೆಡಿಸುವವು. ಈ ಹವೆಯಲ್ಲಿ ಚಳಿಜ್ವರ, ಹೊರಕಡಿಗೆ, ಪ್ಲೀಹ, ಮುಂತಾದ ಶೀತ ರೋಗಗಳು ಬಹುತರ ತಪ್ಪುವದಿಲ್ಲ. ವರ್ಷದೊಳಗೆ ವೊಮ್ಮಾದರೂ ಬೇನೆ ಬೀಳದಂಥ ಮನುಷ್ಯನನ್ನು ಕಾಣುವದು ಅಪರೂಪ. ಆದರೆ ಘಟ್ಟದ ಕೆಳಗಿನ ಹವೆಯು ಹಿತಕರವಾದದ್ದು. ಆರೋಗ್ಯದ ಮಾನದಲ್ಲಿ ಬೈಲು ಶೀಮೆಯ ಕೆಳಗೆ ಸಮುದ್ರತೀರದ ಪ್ರದೇಶವನ್ನು ಯೆಣಿಸ ಬಹುದು. ಇಲ್ಲಿಯ ಹವೆಯಲ್ಲಿ ಆರ್ದ್ರತ್ವವು ಸರ್ವ ಕಾಲವೂ ಇರುತ್ತಿದ್ದಾಗ್ಯೂ, ಹವೆಯೊಳಗಿನ ಶಕೆಯು ಮನುಷ್ಯ ಶರೀರದ ಶಕೆ (೯೮ ಅಂಶ)ಗಿಂತ ಬಹಳ ಕಡಿಮೆ ಎಂದೂ ಆಗುವದಿಲ್ಲ. ಆದರಿಂದ ಈ ಹವೆಯು ಶರೀರಕ್ಕೆ ವೊಳಿತಾಗಿ ಮಾನಿಸುತ್ತದೆ. ಶೀತ ರೋಗಗಳಂತು ಹುಟ್ಟುವ ಸಂಭವವೇ ಇಲ್ಲ. ಘಟ್ಟದ ಮೇಲಿನ ಜನರು ಘಟ್ಟದ ಕೆಳಗೆ ಹೋದರೆ ಮಾತ್ರ ಒಮ್ಮೊಮ್ಮೆ ಶಕೆಯು ಬಾಧಿಸುತ್ತದೆ. ಸರ್ವಕಾಲವೂ ಬೆವರು ಸೋರಿ ಮನುಷ್ಯನು ಅಶಕ್ತನಾಗುತ್ತಾನೆ; ಒಣಕೆಮ್ಮು, ಉರಿಮೂತ್ರ, ಮುಂತಾದ ಉಷ್ಣ ರೋಗಗಳು ಹುಟ್ಟುತ್ತವೆ. ಆದರೆ ಘಟ್ಟದ ಮೇಲಿನಿಂದ ಹೋದಂಥ ಯಲ್ಲ ಮನುಷ್ಯರಿಗೆ ಈ ಬಾಧೆಗಳಾಗುತ್ತವೆಂಬ ಹಾಗಿಲ್ಲ. ಯಾರಿಗಾದರೂ ಆದರೆ ಅವರು ಘಟ್ಟದ ಮೇಲೆ ಯೇರಿದ ಕೂಡಲೆ ಬಹುತರ ಈ ಬಾಧೆಗಳೆಲ್ಲ ನಷ್ಟವಾಗುತ್ತವೆ. ವಿಶೇಷವಾಗಿ ಹೆಂಗಸರಿಗೆ ಘಟ್ಟದ ಕೆಳಗಿನ ಹವೆಯು ಬಹು ಚನ್ನಾಗಿ ಮಾನಿಸುತ್ತದೆ. ಅಲ್ಲಿಯ ನಿವಾಸಿಗಳು, ವಿಶೇಷವಾಗಿ ಹೆಂಗಸರು, ಸುರೂಪಿಗಳು, ಬುದ್ಧಿವಂತರು, ಆರೋಗ್ಯವುಳ್ಳವರು; ಆದರೆ ಕಸುವು ಕಡಿಮೆ. ಈ ಪ್ರದೇಶದಲ್ಲಿ ನೀರು ಸಮೃದ್ಧಿಯಾಗಿ ಇರುವದರಿಂದ ಜನರ ವಸ್ತ್ರ ಪಾತ್ರೆಗಳು ಸ್ವಚ್ಛವಾಗಲಿಕ್ಕೆ ಅನುಕೂಲವಾಗಿ, ಅವರ ಸ್ವಾಭಾವಿಕ ಸುರೂಪಕ್ಕೆ ಮತ್ತಿಷ್ಟು ಶೋಭೆಯುಂಟಾಗುತ್ತದೆ. ಸಾರಾಂಶ, ಆರೋಗ್ಯದ ಮಾನದಿಂದ ಈ ಕರ್ನಾಟಕ ಶೀಮೆಯಲ್ಲಿಯ ಹವೆಯ ವರ್ಗಗಳನ್ನು ಮಾಡಿದರೆ ಅವು ಈ ಪ್ರಕಾರ ಆಗುವವು.—೧ ಬೈಲು ಶೀಮೆಯ ನದೀತೀರ, ೨ ಸಮುದ್ರ ತೀರ, ೩ ಬೈಲು ಶೀಮೆಯ ಇತರ ಪ್ರದೇಶ, ೪ ಮಲ್ಲಾಡದ ಶರಗು, ೫ ಮಲ್ಲಾಡ.

## ನೀರಿನ ಸಂಚಯ.

ಘಟ್ಟದ ಕೆಳಗೆ ಕೆರೆಗಳಿಲ್ಲ; ಆದರೆ ಅಲ್ಲಲ್ಲಿಗೆ ಶೀ ನೀರಿನ ಸಣ್ಣ ದೊಡ್ಡ ಪ್ರವಾಹಗಳು ಹರಿಯುತ್ತಿರುವದಲ್ಲದೆ, ನೆಲದೊಳಗೆ ಸ್ವಲ್ಪ ಅಗಿದರೆ ಶೀ ನೀರಿನ ಶಲೆ ಹತ್ತುವದು. ಅದರಿಂದ ಇಲ್ಲಿಯ ಜನರಿಗೆ ಕುಡಿಯಲಿಕ್ಕೂ ಬಟ್ಟೆಗಳನ್ನು ವೊಗಿಯಲಿಕ್ಕೂ ತೋಟ ಗದ್ದೆಗಳಿಗೂ ನೀರಿನ ತಾಪತ್ರಯವಾಗುವದಿಲ್ಲ. ಮಲ್ಲಾಡ ಭಾಗದಲ್ಲಿಯೂ ನೀರಿಗೆ ಕೊರತೆ ಇಲ್ಲ. ಹೇಳತಕ್ಕಂಥ ದೊಡ್ಡ ಕೆರೆಗಳು ಈ ಭಾಗದಲ್ಲಿಲ್ಲ. ಆದರೆ ಹೊಂಡಗಳೂ ಬಾವಿಗಳೂ ಸರ್ವಕಾಲವೂ ತುಂಬಿರುತ್ತವೆ. ಹೊಳೆ ಹಳ್ಳಗಳಿಗೂ ಕೊರತೆ ಇಲ್ಲ. ಬಾವಿಯನ್ನು ಅಗಿಯುವವರಿಗೆ ಬಹಳ ಶ್ರಮವೂ ವೆಚ್ಚವೂ ಬೇಡ; ಹತ್ತಿಪ್ಪತ್ತು ಫೂಟನೊಳಗೆ ಸವಿನೀರು ಹತ್ತಬಹುದು. ಆದರೆ ಜಲಾಶಯಗಳ ದಂಡೆಯಲ್ಲಿದ್ದ ಗಿಡಗಳ ಯೆಲೆ, ಹೂ, ಕಾಯಿ, ಬೇರು, ಮುಂತಾದವುಗಳು ನೀರೊಳಗೆ ಬಿದ್ದು ಕೊಳಿಯುವದರಿಂದ ಕ್ರಿಮಿಗಳು ಹುಟ್ಟುತ್ತವೆ. ಅಂಥಾ ನೀರು ಕುಡಿಯುವವರಿಗೆ ರೋಗಗಳು ತಪ್ಪುವದಿಲ್ಲ. ಮಲ್ಲಾಡದ ಶರಗಿನ ಪಶ್ಚಿಮ ಭಾಗವು ಮಲ್ಲಾಡವನ್ನೂ ಪೂರ್ವ ಭಾಗವು ಬೈಲು ಶೀಮೇಯನ್ನೂ ಹೋಲುತ್ತವೆಂದು ಸಾಧಾರಣವಾಗಿ ಹೇಳಬಹುದು. ಆದರೂ ಪಶ್ಚಿಮ ಭಾಗದ ನೀರು ಮಲ್ಲಾಡದಷ್ಟು ರೋಗಕರವಲ್ಲ; ಬಾವಿಯ ನೀರಿನ ಮೇಲೆ ಬೆಳಿಗ್ಗೆ ವೊಂದು ಬಗೆಯ ಎಣ್ಣೆಯಂಥ ತೆಪ್ಪವು ನಿಂತಿರುತ್ತದೆ. ಅದರಿಂದ ಆ ನೀರು ಕುಡಿಯುವವರ ಆರೋಗ್ಯ ಕೆಡಬಹುದು. ಆದಾಗ್ಯೂ ಈ ಪಶ್ಚಿಮ ಭಾಗದಲ್ಲಿ ಬಹು ದಿವಸ ವಾಸವಾಗಿದ್ದವರಲ್ಲಿ ಸುಮಾರು ಅರ್ಧ ಜನರು ಆರೋಗ್ಯದಿಂದಿರುತ್ತಾರೆಂದು ಹೇಳಿದರೆ ಬಹಳ ತಪ್ಪಾಗಲಿಕ್ಕಿಲ್ಲ. ಮಲ್ಲಾಡದ ಶರಗಿನಲ್ಲಿ ದೊಡ್ಡ ದೊಡ್ಡ ಕೆರೆಗಳು ಬಹಳ ಕಡೆಯಲ್ಲಿ ಇರುತ್ತವೆ. ಅವುಗಳಲ್ಲಿ ಮದಗ, ಹಾವೇರಿ, ಕರ್ಜಗಿ, ನಾಗನೂರು (ಬಂಕಾಪುರ), ಡಂಬಳ, ಇವುಗಳ ಬಳಿಯಲ್ಲಿದ್ದ ಕೆರೆಗಳು ಪ್ರಸಿದ್ಧ. ಮದಗದ ಕೆರೆಯಲ್ಲಿ ಕುಮುದ್ವತೀ ನದಿಯು ಹರಿಯುತ್ತಿರುವ ಕಾರಣ ಇದರಲ್ಲಿಯ ಸಂಚಯವು ಬೇಸಿಗೆಯಲ್ಲಿ ಸಹ ಬಹಳ ಕಡಿಮೆಯಾಗುವದಿಲ್ಲ. ಉಳಿದ ಕೆರೆಗಳು ಮಳೆ ಕಡಿಮೆಯಾದರೆ ಬೇಸಿಗೆಯಲ್ಲಿ ಬತ್ತುತ್ತವೆ. ಬೈಲು ಶೀಮೆಯಲ್ಲಿ ನೀರಿನ ತಾಪತ್ರಯವಿದ್ದಷ್ಟು ಯೆಲ್ಲಿಯೂ ಇಲ್ಲ. ನದೀತೀರಗಳ ಹೊರ್ತು ಈ ರುಕ್ಷ ಪ್ರದೇಶದಲ್ಲಿ ನೀರಿನ ಸಮೃದ್ಧಿಯುಳ್ಳಂಥ ಗ್ರಾಮಗಳನ್ನು ಕಾಣುವದು ಬಹು ದುರ್ಲಭವು. ನೀರು ದೊರೆಯದ ಮೂಲಕ ಜನರ ಮೈ ಮೇಲಿನ ಬಟ್ಟೆಗಳು ಬಹು ಮಲಿನವಿರುತ್ತವೆ; ಅವರು ಯೆಂಟೆಂಟು ದಿವಸ ಸ್ನಾನ ಮಾಡುವದಿಲ್ಲ; ಮನೆಗಳೂ ಓಣಿಗಳೂ ಕಶ್ಮಲದಿಂದ ತುಂಬಿರುತ್ತವೆ. ಬೇಸಿಗೆಯಲ್ಲಿ ವಿಶೇಷವಾಗಿ ಕೆಲಕೆಲವು ಗ್ರಾಮ ನಿವಾಸಿಗಳ ತಾಪತ್ರಯವನ್ನು ನೋಡುವವರಿಗೆ ದಯ ಬರುತ್ತದೆ. ಬೆಳಿಗ್ಗೆ ಕೊಡ ಹಗ್ಗಗಳನ್ನು ಹೊತ್ತು ಕೊಂಡು ಗಂಡಸರೂ ಹೆಂಗಸರೂ ಹರದಾರಿಗಿಂತ ಹೆಚ್ಚು ದೂರ ನಡಿದು ಹೋಗಿ ವೊಂದು ಕೊಡ ನೀರು ಸಂಪಾದಿಸಿ ಕೊಂಡು ಮನೆಗೆ ಬಂದರೆ ಬಹು ಭಾಗ್ಯವೆಂದೆಣಿಸುತ್ತಾರೆ. ಆದದರಿಂದ ಬೆಳಿಗಿನಿಂದ ಸಾಯಂಕಾಲದ ವರೆಗೆ

ನೀರಿನದೊಂದೇ ಚಿಂತೆಯು ಯಾವತ್ತು ಜನರ ಮನಸಿನಲ್ಲಿ ಕಟಿಯುತ್ತಿರುತ್ತದೆ. ಮನೆಗೆ ಯಾರಾದರೂ ಪರಸ್ಥರು ಬಂದರೆ ನೀರು ಮಾತ್ರ ಬೇಡ ಬೇಡಿರೆಂದು ಮನೆಯವರು ದೈನ್ಯದಿಂದ ಹೇಳಿಕೊಳ್ಳುತ್ತಾರೆ. ಮಾರ್ಗಸ್ಥರು ನಾಲ್ಕಾಲ್ಕು ಹರದಾರಿ ನೀರು ಕಾಣದೆ ಬಳಲುವರು. ಬಾವಿಗಳೂ, ಹಳ್ಳಗಳೂ, ಸಣ್ಣ ಹೊಳೆಗಳೂ ಸಹ ಬೇಸಿಗೆಯಲ್ಲಿ ಬತ್ತುತ್ತವೆ. ಕೆಲವು ಬಾವಿಗಳಲ್ಲಿ ದೈವಯೋಗದಿಂದ ನೀರು ಅಲ್ಪ ಸ್ವಲ್ಪ ದೊರೆಯುತ್ತಿದ್ದರೆ, ಅದು ಪಾತಾಳಕ್ಕೆ ಇಳಿದ ಹಾಗೆ ಕಾಣಿಸುತ್ತದೆ; ಅದನ್ನು ಮೇಲಿಂದ ನೋಡುವವರ ಕಣ್ಣು ತಿರುಗುತ್ತವೆ. ಆ ನೀರು ಕೈಗೆ ಬರುವ ಪೂರ್ವದಲ್ಲಿ ಅದನ್ನು ಬಯಸುವವರ ಕಣ್ಣೊಳಗಿಂದ ನೀರು ಸುರಿಯ ಹತ್ತುತ್ತದೆ. ಬೈಲು ಶೀಮೆಯಲ್ಲಿ ಹೇಳತಕ್ಕಂಥ ಕೆರೆಗಳು ದುರ್ಲಭ. ವಿಜಾಪುರದ ಹತ್ತರ ಮಮದಾಪುರವೆಂಬ ಗ್ರಾಮದ ಬಳಿಯಲ್ಲಿ ಎರಡು ದೊಡ್ಡ ಕೆರೆಗಳಿವೆ. ಅವುಗಳಲ್ಲಿ ದೊಡ್ಡ ಕೆರೆಯು ತುಂಬಿದಾಗ ಅದರ ಕ್ಷೇತ್ರವು ೮೬೪ ಎಕರು ಅಂದರೆ ೧½ ಚಚ್ಚೌಕು ಮೈಲು ಇರುತ್ತದೆ. ಅದರ ವೊಡ್ಡು ಅರ್ಧ ಮೈಲಿಗಿಂತ ಹೆಚ್ಚು ಉದ್ದವದೆ. ಮಳೆ ಬಹಳ ಕಡಿಮೆಯಾದರೆ ಮಾತ್ರ ಈ ಕೆರೆಯ ನೀರು ಬತ್ತುತ್ತದೆ. ಆಗ ಕೆರೆಯೊಳಗೆ ಬತ್ತ ಬಿತ್ತುವರು. ಬಾದಾವಿಯಲ್ಲಿ ಬನಶಂಕರಿಯ ಕೆರೆಯು ಸಣ್ಣದಿದ್ದಾಗ್ಯೂ ಅದರ ನೀರು ಬತ್ತುವದಿಲ್ಲ. ಇದೇ ಮೇರೆಗೆ ಬಾದಾವಿಯ ನೆರೆಯಲ್ಲಿ ಗೋವನಕಿ, ನಂದಿಕೇಶ್ವರ, ಕೆಂದೂರು, ನೀಲಗುಂದ, ಎಂಬ ಗ್ರಾಮುಗಳ ಕೆರೆಗಳು ತಕ್ಕ ಮಟ್ಟಿಗೆ ದೊಡ್ಡವಿದ್ದು, ಬಹುತರ ಬತ್ತುವದಿಲ್ಲ.

ಮುಂದೆ ನಾಲ್ಕನೇ ಭಾಗದಲ್ಲಿ ವೊಕ್ಕಲತನದ ಸಂಬಂಧದಿಂದ ಜಲಾಶಯಗಳನ್ನು ಕುರಿತು ಹೆಚ್ಚಿಗೆ ವಿಸ್ತಾರವಾಗಿ ಬರಿಯುವೆವು.